ಸಂಪುಟ : 13 Volume | ಸಂಚಿಕೆ : 224 Issue | ಪುಟಗಳು : 12 Pages | ಮಂಗಳವಾರ 21 ಅಕ್ಟೋಬರ್ 2025 | ₹2 | PRGINO.120927(RNINO:KARKAN/2011/48371) | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಬಳ್ಳಾರಿ | ವಿಜಯನಗರ | ಕೊಪ್ಪಳ & ಬಾಗಲಕೋಟೆ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಮಾತುಗಳು ಪರಸ್ಪರ ಬೇರ್ಪಡಿಸಲು ಇರುವುದಲ್ಲ ಪರಸ್ಪರಸೇರಿಸಲುಇರುವುದಾಗಿದೆ
ಮಹಾತ್ಮ ಗಾಂಧೀಜಿ .

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

# ತಂಟೆಗೆ ಬಂದರೆ ಬಿಡಲ್ಲ: ಪ್ರಧಾನಿ

ಮಲ್ಲಮ್ಮನುಡಿ ವಾರ್ತೆ

ಪಣಜಿ:ಅ.20: ನಮ್ಮ ತಂಟೆಗೆ ಬಂದರೆ ಸುಮ್ಮನೆ ಬಿಡುವುದಿಲ್ಲ ಎಂಬುದನ್ನು ಆಪರೇಷನ್ ಸಿಂಧೂರ ಕಾರ್ಯಾಚರಣೆಮೂಲಕಪಾಕಿಸ್ತಾನಕ್ಕೆ ಖಡಕ್ ಸಂದೇಶ ರವಾನಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಆಪರೇಷನ್ ಸಿಂಧೂರ ಸಂದರ್ಭದಲ್ಲಿಮೂರುಸೇನಾಪಡೆಗಳ ಹೊಡೆತಕ್ಕೆಪಾಕಿಸ್ತಾನತತ್ತರಿಸಿಹೋಗಿತ್ತು. ನಮ್ಮ ಸೇನೆಯನ್ನು ಎದುರಿಸಲಾಗದೆ ಪಾಕ್ ಶರಣಾಗತಿಗೆಮೊರೆಯಿಟ್ಟಿತು ಎಂದಅವರುಸೇನಾಪಡೆಗಳಅದ್ಭುತ ಶೌರ್ಯ ಮತ್ತು ದೃಢಸಂಕಲ್ಪವನ್ನು ಮುಕ್ತಕಂಠದಿಂದ ಶ್ಲಾಘಿಸಿದರು.



ಬೆಳಕಿನ ಹಬ್ಬ ದೀಪಾವಳಿ ಶುಭ ಸಂದರ್ಭದಲ್ಲಿಗೋವಾ ರಾಜಧಾನಿ ಪಣಜಿಯಲ್ಲಿಐಎನ್‌ಎಸ್ ವಿಕ್ರಾಂತ್ ನಲ್ಲಿನೌಕಾಪಡೆಯಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿದ ಅವರು , ಐಎನ್‌ಎಸ್ ವಿಕ್ರಾಂತ್ ಕೇವಲ ಯುದ್ಧ ನೌಕೆಯಲ್ಲ. 21ನೇ ಶತಮಾನದಭಾರತದಕಠಿಣಪರಿಶ್ರಮ, ಪ್ರತಿಭೆ, ಪ್ರಭಾವ ಹಾಗೂ ಬದ್ಧತೆಗೆ ಸಾಕ್ಷಿಯೆಂದುಮೋದಿಹೇಳಿದರು. ಐಎನ್‌ಎಸ್ ವಿಕ್ರಾಂತ್ ಭಾರತದ ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಇದುಆತ್ಮನಿರ್ಭರ ಭಾರತದಅತ್ಯುನ್ನತಸಂಕೇತವುಆಗಿದೆ ಎಂದರು. ಐಎನ್‌ಎಸ್ ವಿಕ್ರಾಂತ್‌ನಲ್ಲಿ ನಿನ್ನೆಕಳೆದರಾತ್ರಿಯನ್ನು ಪದಗಳಲ್ಲಿ ವರ್ಣಿಸುವುದುಕಷ್ಟ. ನಿಮ್ಮಲ್ಲಿರುವ ಆಗಾಧಶಕ್ತಿ ಮತ್ತು ಉತ್ಸಾಹವನ್ನು ಕಂಡಿದೆ. ನೀವುದೇಶಭಕ್ತಿಗೀತೆಗಳನ್ನು ಹಾಡುವುದನ್ನು ನೋಡಿದಾಗನಿಮ್ಮ ಹಾಡುಗಳಲ್ಲಿ ಆಪರೇಷನ್ ಸಿಂಧೂರ ನೆನಪಾಗುತ್ತದೆ ಎಂದು ಹೇಳಿದರು.

ಯುದ್ಧಭೂಮಿಯಲ್ಲಿನಿಂತಿರುವ ಯೋಧರಅನುಭವನ್ನು ಯಾವುದೇ ಪದಗಳಲ್ಲಿಸಂಪೂರ್ಣವಾಗಿಸಾಧ್ಯವಿಲ್ಲ ಎಂಬುದುತಮ್ಮ ಅರಿವಿಗೆಬಂದಿದೆ. ಹೀಗಾಗಿದೀಪಾವಳಿಯನ್ನುನಿಮ್ಮೊಂದಿಗೆ ಕಳೆದಿದ್ದು ತುಂಬಾ ವಿಶೇಷವಾಗಿದೆ ಎಂದು ಬಣ್ಣಿಸಿದರು. ಭಾರತವನ್ನು ವಿಶ್ವದಪ್ರಮುಖರಕ್ಷಣಾರಫ್ತುದಾರರ ಪೈಕಿಒಂದನ್ನಾಗಿಮಾಡುವುದುಕೇಂದ್ರ ಸರ್ಕಾರದಗುರಿಯಾಗಿದೆ. 2014ರಿಂದ ಇದುವರೆಗೂ 40ಕ್ಕೂ ಹೆಚ್ಚು ಯುದ್ಧ ನೌಕೆಗಳು ಮತ್ತು ಜಲಾಂತರ್ಗಾಮಿ ನಿರ್ಮಿಸಿದ್ದೇವೆಎಂದರು. ಬ್ರಹ್ಮೋಸ್ ಕ್ಷಿಪಣಿ ಹೆಸರು ಕೇಳಿದರೆ ಕೆಲವರ ಹೆಸರುಗಳಲ್ಲಿ ನಡುಕ ಉಂಟು ಮಾಡುತ್ತದೆ ಎಂದು ಪಾಕಿಸ್ತಾನಕ್ಕೆ ಪರೋಕ್ಷ ತಿರುಗೇಟು ನೀಡಿದರು. ಪಾಕ್ ವಿರುದ್ಧ ಪ್ರಯೋಗಿಸಲಾದ ಬ್ರಹ್ಮೋಸ್‌ಕ್ಷಿಪಣಿಗೆಅನೇಕದೇಶಗಳು ಖರೀದಿಸಲುಉತ್ಸುಕವಾಗಿದೆಎಂದು ಹೇಳಿದರು.

## ಸ್ವದೇಶಿ ಉತ್ಪಾದನೆಗೆ ಒತ್ತು

ಕಳೆದದಶಕದಲ್ಲಿ, ಭಾರತದರಕ್ಷಣಾ ವಲಯಸ್ವದೇಶಿನಿರ್ಮಾಣಕ್ಕೆಹೆಚ್ಚಿನ ಒತ್ತುನೀಡಿದೆ. ಕಳೆದ11 ವರ್ಷಗಳಲ್ಲಿ ಉತ್ಪಾದನೆಮೂರುಪಟ್ಟುಹೆಚ್ಚಾಗಿದೆ, ಸರಿಸುಮಾರುಪ್ರತಿ40 ದಿನಗಳಿಗೊಮ್ಮೆ ನೌಕಾಪಡೆಗೆ ಹೊಸ ಯುದ್ಧನೌಕೆ ಅಥವಾ ಜಲಾಂತರ್ಗಾಮಿ ಸೇರಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆಬ್ರಹ್ಮೋಸ್ ಕ್ಷಿಪಣಿಗೆ ಜಾಗತಿಕಬೇಡಿಕೆಹೆಚ್ಚಿಸಿದೆ, ಭಾರತವು ಶೀಘ್ರದಲ್ಲೇ ವಿಶ್ವದ ಅಗ್ರ ರಕ್ಷಣಾ ರಫ್ತುದಾರರಲ್ಲಿ ಸ್ಥಾನ ಪಡೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ರೂಪಾಂತರದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಕ್ಕಾಗಿಅವರುಸ್ಟಾರ್ಟ್ ಅಪ್‌ಗಳುಮತ್ತುಸ್ಥಳೀಯರಕ್ಷಣಾ ಘಟಕಗಳನ್ನು ಶ್ಲಾಘಿಸಿದಅವರುಹೊಸ ಪೀಳಿಗೆಯಭರವಸೆಯನ್ನು ದೇಶದ ಶಕ್ತಿ ಎಂದಿದ್ದಾರೆ.

## ನಕ್ಸಲ್ ಮುಕ್ತ ಭಾರತ

ಸೇನಾಪಡೆಗಳ ಶೌರ್ಯ ಮತ್ತು ದೃಢಸಂಕಲ್ಪದಿಂದದೇಶವನ್ನು ನಕ್ಸಲ್ ಮುಕ್ತಗೊಳಿಸಲುದಾಪುಗಾಲುಇಟ್ಟಿದ್ದೇವೆ. ನಕ್ಸಲ್‌ಹಿಂಸಾಚಾರವನ್ನುನಿರ್ಮೂಲನೆ ಮಾಡುವಲ್ಲಿಮಹತ್ವದಮೈಲಿಗಲ್ಲನ್ನು ದೇಶಸಾಧಿಸಿದೆಎಂದುಪ್ರಧಾನಿಮೋದಿ ಹೇಳಿದರು. ದೇಶದಲ್ಲಿ125 ಜಿಲ್ಲೆಗಳು ನಕ್ಸಲರಕಪಿಮುಷ್ಠಿಯಲ್ಲಿದ್ದವು. ನಕ್ಸಲ್ ನಿಗ್ರಹಕಾರ್ಯಾಚರಣೆಯಿಂದಈಸಂಖ್ಯೆ ಈಗ11 ಜಿಲ್ಲೆಗಳಿಗೆಇಳಿದಿದೆ. ಶೇ.90 ರಷ್ಟುಯಶಸ್ಸು ಸಾಧಿಸಲಾಗಿದೆ. ಮುಂದಿನ ದಿನಗಳಲ್ಲಿನಕ್ಸಲ್‌ಹಿಂಸಾಚಾರವನ್ನು ಸಂಪೂರ್ಣನಿರ್ಮೂಲನೆಮಾಡುವ ವಿಶ್ವಾಸ ತಮ್ಮದಾಗಿದೆ ಎಂದರು.

# ಹಸಿರು ಪಟಾಕಿ ಬಳಸಲು ಸಿಎಂ ಮನವಿ

ಮಲ್ಲಮ್ಮನುಡಿ ವಾರ್ತೆ

ಬೆಂಗಳೂರು:ಅ.20:ರಾಜ್ಯದೆಲ್ಲೆಡೆ ಸೋಮವಾರದೀಪಾವಳಿಯನ್ನು ಉತ್ಸಾಹದಿಂದಆಚರಿಸಲಾಗುತ್ತಿದ್ದು, ಜನರುದೇವಾಲಯಗಳಿಗೆತೆರಳಿಪೂಜೆ ಸಲ್ಲಿಸುತ್ತಿದ್ದಾರೆ. ಹೂವುಗಳುಮತ್ತು ದೀಪಗಳಿಂದತಮ್ಮ ಮನೆಗಳನ್ನು ಅಲಂಕರಿಸಿದ್ದು, ಬೆಳಕಿನ ಹಬ್ಬದ ಅಂಗವಾಗಿ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆಶಿವಕುಮಾರ್ ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳನ್ನು ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮ ವೇದಿಕೆ 'ಎಕ್ಸ್' ನಲ್ಲಿ ಸಿದ್ದರಾಮಯ್ಯ, 'ನಾಡಬಂಧುಗಳಿಗೆ ದೀಪಾವಳಿ ಹಬ್ಬದಶುಭಾಶಯಗಳು. ಕತ್ತಲಿನಿಂದ ಬೆಳಕಿನಹಾದಿತೋರುವಈಹಬ್ಬವು ಸಮಾಜವನ್ನುಬಾಧಿಸುತ್ತಿರುವದ್ವೇಷ, ಹಿಂಸೆ, ಅಸತ್ಯ, ಅಶಾಂತಿ, ಬಡತನ, ಅಜ್ಞಾನಗಳಅಂಧಕಾರವನ್ನುಸರಿಸಿ, ಸ್ನೇಹ, ಸಹಬಾಳ್ವೆ, ಸತ್ಯ, ನೆಮ್ಮದಿ, ಸುಜ್ಞಾನದಬೆಳಕನ್ನುಎಲ್ಲೆಡೆಬೆಳಗಿಸಲಿ ಎಂದು ಹಾರೈಸುತ್ತೇನೆ.' ಎಂದು ಹೇಳಿದ್ದಾರೆ.



'ಹಬ್ಬದ ಸಂಭ್ರಮದ ಜೊತೆಗೆ ಪರಿಸರಕಾಳಜಿಯನ್ನು ಮರೆಯದಿರಿ. ಹಸಿರುಪಟಾಕಿಗಳನ್ನೇ ಬಳಸಿ, ಎಳೆಯ ಮಕ್ಕಳು ಪಟಾಕಿ ಸಿಡಿಸುವಾಗಹಿರಿಯರುಅವರಬಗ್ಗೆ ಜಾಗೃತೆವಹಿಸಿ. ದೀಪಾವಳಿಯನ್ನು ಸಂಭ್ರಮದಿಂದಲೂ,ಸುರಕ್ಷಿತವಾಗಿಯೂ ಆಚರಿಸಿ ಎಂದು ವಿನಂತಿಸುತ್ತೇನೆ. ಮತ್ತೊಮ್ಮೆ, ನಿಮ್ಮೆಲ್ಲರಿಗೂ ದೀಪಾವಳಿಯಶುಭಾಶಯಗಳು' ಎಂದು ಹೇಳಿದ್ದಾರೆ.

'ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು. ಬೆಳಕಿನಹಬ್ಬ ದೀಪಾವಳಿಯು ಪ್ರತಿಯೊಬ್ಬರ ಬದುಕಿನಸಂಕಷ್ಟಗಳನ್ನು ಕಳೆದು, ಪ್ರಗತಿಯ ಬೆಳಕು ಬದುಕಿನಲ್ಲಿ ಪಸರಿಸಲಿ. ದೀಪಗಳ ಹಬ್ಬವು ತಮ್ಮೆಲ್ಲರಜೀವನದಲ್ಲಿಯಶಸ್ಸು, ಸಮೃದ್ಧಿ, ಐಶ್ವರ್ಯವನ್ನುಕರುಣಿಸಲಿ ಎಂದುಪ್ರಾರ್ಥಿಸುತ್ತೇನೆ' ಎಂದು ಉಪಮುಖ್ಯಮಂತ್ರಿ ಶಿವಕುಮಾರ್ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕರ್ನಾಟಕದಲ್ಲಿ ದೀಪಾವಳಿಯನ್ನು ಮೂರು ದಿನಗಳ ಕಾಲ ಆಚರಿಸಲಾಗುತ್ತದೆ. ನರಕಚತುರ್ದಶಿ, ಇದರಲ್ಲಿಸಾಂಪ್ರದಾಯಿಕಎಣ್ಣೆಸ್ನಾನ ಮತ್ತು ಪಟಾಕಿ ಸಿಡಿಸಲಾಗುತ್ತದೆ; ಸಂಪತ್ತಿನದೇವತೆಗೆಅರ್ಪಿತವಾದ ಅಮಾವಾಸ್ಯೆಯಂದು(ಅಮಾವಾಸ್ಯೆ) ಲಕ್ಷ್ಮಿ ಪೂಜೆಮತ್ತು ರಾಜಬಲಿಯನ್ನು ಗೌರವಿಸಲು ಬಲಿಪಾಡ್ಯಮಿ ಆಚರಿಸಲಾಗುತ್ತದೆ.








ನಾಡಿನ ಸಮಸ್ತ ಜನತೆಗೆ
ಹುಮನಾಬಾದ ಪುರಸಭೆ ವತಿಯಿಂದ
ಹುಮನಾಬಾದ ನಗರ ಸ್ವಚ್ಛತೆಯೇ ಪುರಸಭೆಯ ಪ್ರಥಮ ಆದ್ಯತೆ.
ಸ್ವಚ್ಛತೆಯಿದ್ದರೇ ರೋಗಗಳು ದೂರ.
ಸುಂದರ, ಸ್ವಚ್ಛ ಹುಮನಾಬಾದ ನಗರವೇ ಪುರಸಭೆಯ ಆದ್ಯತೆ
स्वच्छ भारत
एक कदम स्वच्छता की ओर

# ಜನಪದರ ಬೆಳಕಿನ ಹಬ್ಬ ದೀಪಾವಳಿ

ಬಾಗಲಕೋಟೆ-ದೀಪಾವಳಿ ನಮ್ಮ ಜನಪದರ ಅತ್ಯಂತ ದೊಡ್ಡ ಹಬ್ಬ. ಸಂಭ್ರಮ ಉಲ್ಲಾಸದಿಂದ ಆಚರಿಸುವ ಈ ಹಬ್ಬಕ್ಕೆ ದೊಡ್ಡ ಪರಂಪರೆ ಇದೆ. ನಮ್ಮ ಜನಪದರ ಕಲೆ ಮತ್ತು ಸಂಸ್ಕೃತಿ ಆರಾಧನಾ ಮನೋಭಾವದ ಪ್ರತೀಕವಾಗಿದೆ. ಪ್ರಕೃತಿಯ ಸೂರ್ಯ, ಚಂದ್ರ, ಭೂಮಿ ಆಕಾಶ, ಮಣ್ಣು ಗಿಡಮರ, ಪ್ರಾಣಿ ಪಕ್ಷಿಗಳು ಮೊಲಾದವುಗಳಲ್ಲಿ ದೇವರು ದೈವವನ್ನು ಕಾಣುವ ಜನಪದರು ಕಾಲಕ್ಕನುಗುಣವಾಗಿ ಎಲ್ಲ ಆಚರಣೆಗಳನ್ನು ಪರಂಪರೆಯಿಂದಲೂ ವಿಧಿವತ್ತಾಗಿ ಆಚರಿಸಿಕೊಂಡು ಬಂದಿದ್ದಾರೆ. ಅದರಂತೆ ದೀಪಾವಳಿಯೂ ಒಂದು.



ದೀಪ ಜನಪದರ ತಿಳುವಳಿಕೆಯಲ್ಲಿ ಮಹತ್ವದ್ದಾಗಿದೆ. ಬೆಳಕಿನ ಹಬ್ಬ ದೀಪಾವಳಿಯಲ್ಲಿ ಎಲ್ಲರೂ ಕೂಡಿ ಸಂಭ್ರಮಿಸುವ ಸಂದರ್ಭವಾಗಿದೆ. ಕಾರ್ತೀಕ ಮಾಸದ ಆಗಮನ, ವಾರ್ಷಿಕ ದುಡಿಮೆಯ ಫಲದಿಂದ ತುಂಬಿ ನಿಂತ' ಹೊಲಗದ್ದೆಗಳು, ಹೊಸ ಉತ್ಸಾಹ, ಸಂತೋಷ ನೀಡುತ್ತವೆ. ಬೆಳಕಿನ ಹಬ್ಬದಲ್ಲಿ ಹತ್ತಾರು ಆಚರಣೆಗಳು, ಆಸ್ವಯುಜ ಬಹುಳ ದ್ವಾದಶಿಯಿಂದ ಎಂಟು ದಿನಗಳವರೆಗೆ ಅಂದರೆ ದ್ವಾದಶಿ, ಧನ ತ್ರಯೋದಶಿ, ನರಕ ಚತುರ್ಥಿ, ಅಮವಾಸ್ಯೆ, ಬಲಿ ಪಾಡ್ಯಮಿ, ಭಾವನ ಬಿದಿಗೆ, ಅಕ್ಕನ ತದಿಗೆ, ಅಮ್ಮನ ಚೌತಿ ಈ ದಿನಗಳನ್ನು ದೀಪಾವಳಿಯ ಪರ್ವ ದಿನಗಳೆಂದು ಕರೆಯತ್ತಾರೆ.

ನರಕ ಚತುರ್ಥಿಯಂದು ಹಬ್ಬದ ಆರಂಭ. ಅಂದೇ ನೀರು ತುಂಬುವ ಹಬ್ಬ. ಜಳಕ ಮಾಡುವ ಹಂಡೆ ಹರಿವೆಗಳಿಗೆ ಕೆಮ್ಮಣ್ಣು ಬಳಿದು ಪವಿತ್ರಗೊಳಿಸುತ್ತಾರೆ. ಹಬ್ಬದ ಎರಡನೆಯ ದಿನ ಬಲಿಪಾಡ್ಯಮಿ, ಊರವರಿಗೆ ಅದು ಪಾಡ್ಯದ ದಿನ, ಎಣ್ಣೆ ಉಜ್ಜಿ ಮನೆಮಂದಿಗೆಲ್ಲ ಅಭ್ಯಂಜನಸ್ನಾನ. ಮೈತೊಳೆದ ದನಕರುಗಳಿಗೆ ಜೇಡಿ, ಕೆಮಣ್ಣು, ಉಗನೆಸರ, ಗೋಮಾಲೆ, ಚೆಂಡು ಹೂವಿನ ಸರಗಳ ಅಲಂಕಾರವಾಗುತ್ತದೆ. ಅಂದಿನ ವಿಶೇಷ ಆಚರಣೆ ಬಲೀಂದ್ರ ಪೂಜೆ, ಅನ್ನ ಬ್ರಹ್ಮನ ಆರಾಧನೆಯ ಹಬ್ಬವಾಗುವುದರ ಜೊತೆಗೆ ಒಕ್ಕಲು ಮಕ್ಕಳ ಸಂಭ್ರಮದ ಹಬ್ಬವೂ ಆಗಿದೆ.

ದೀಪಾವಳಿಯಂದು ಹೊಸ ಬಟ್ಟೆ ಧರಿಸಿ ದೇವಾಲಯಗಳಿಗೆ ಹೋಗುತ್ತಾರೆ. ದೀಪಾವಳಿ ಸಂದರ್ಭದಲ್ಲಿ ದೀಪಗಳಿಂದ ಮನೆಯನ್ನು ಅಲಂಕರಿಸಿ ಸಂತಸವಾಗಿದ್ದರೆ ವರ್ಷವಿಡೀ ಆ ಮನೆಯಲ್ಲಿ ಹರ್ಷದ ಹೊನಲು ಹರಿಯುವುದು. ದೀಪ ಬೆಳಗಿಸಿದ ಮನೆಯಲ್ಲಿ ಲಕ್ಷ್ಮೀ ನೆಲೆಸುತ್ತಾಳೆಂಬ ನಂಬುಗೆ ಇದೆ. ದೀಪಾವಳಿ ಹಬ್ಬವು ಕತ್ತಲೆಯನ್ನು ದೂರಮಾಡಿ ಎಲ್ಲೆಲ್ಲೊ ದೀಪ ಬೆಳಗಿಸಿ ಬೆಳಕು ಕಾಣುವ ಹಬ್ಬ. ಲಕ್ಷ್ಮಿ ಪೂಜೆಯ ಸಂಭ್ರಮ ಎದ್ದು ಕಾಣುತ್ತದೆ. ದೀಪಾವಳಿಯ ದಿನ ಭೂಮಿ ತುಲಾ ರಾಶಿಗೆ ಪ್ರವೇಶಿಸುವ ಕಾರಣ ವ್ಯಾಪಾರಸ್ಥರು ಆ ದಿನ ತಮ್ಮ ಲೆಕ್ಕದ ಪುಸ್ತಕ ಮತ್ತು ತೂಕದ ಸಾಮಾನುಗಳನ್ನು ಪೂಜಿಸುತ್ತಾರೆ. ಜೊತೆಗೆ ಯಾವುದಾದರೊಂದು ಹೊಸ ವಸ್ತುವನ್ನು ಆ ದಿನ ಕೊಂಡು ತರುತ್ತಾರೆ. ಈ ರೀತಿ ಕೊಂಡು ತರುವುದರಿಂದ ಒಳ್ಳೆಯದಾಗುತ್ತದೆ ಎಂಬ ನಂಬುಗೆ ಇದೆ.

**ಆಣೀ ಪೀಣಿ:**

ದೀಪಾವಳಿ ಹಬ್ಬದಾಚರಣೆಯ ಸಂದರ್ಭದಲ್ಲಿ ಅನೇಕ ಆಚರಣೆಗಳನ್ನು ಕಾಣುತ್ತೇವೆ. ನೀರು ತುಂಬುವ ಹಬ್ಬ, ಆರತಿ ಬೆಳಗುವ ಹಬ್ಬ, ಪಾಂಡವರನ್ನು ಕೂಡಿಸುವ ಹಬ್ಬ, ಲಕ್ಷ್ಮೀ, ಸರಸ್ವತಿ ಪೂಜೆ ಮೊದಲಾದವುಗಳನ್ನು ಆಚರಿಸುತ್ತೇವೆ. ಈ ಆಚರಣೆಗಳಲ್ಲಿಯೇ ಒಂದು ವಿಶಿಷ್ಟ ಸಂಪ್ರದಾಯ ಆಣೀ ಪೀಣಿ ಹಬ್ಬ.


ದೀಪಾವಳಿ ಹಬ್ಬದ ಕಾರ್ತಿಕ ಶುದ್ಧ ಪ್ರತಿಪದೆಯಿಂದ ಐದು ದಿನಗಳ ಕಾಲ ಅಂದರೆ ಪಂಚಮಿಯವರೆಗೆ ನಡೆಯುವದು. ದನಕರುಗಳ ಮೇಲಿದ್ದ ಪೀಡೆಯನ್ನು ದೂರಮಾಡಿ ರೋಗರುಜಿನಗಳು ಬಾರದಿರಲಿ, ಪಶುಸಂತಾನ ಬೆಳೆಯಲಿ ಎಂಬುವುದೇ ಈ ಆಚರಣೆಯ ಮೂಲ ಉದ್ದೇಶ. ಆಣೀ ಪೀಣಿ ಆಚರಣೆ ಕರ್ನಾಟಕದ ಬಾಗಲಕೋಟೆ, ವಿಜಯಪುರ, ಗದಗ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಆಚರಿಸುತ್ತಾರೆ. ಮಲೆನಾಡಿನಲ್ಲೂ ಈ ಆಚರಣೆ ಕಾಣುತ್ತೇವೆ. ಅಲ್ಲಿ ಅಂಟಿಗೆ ಪಂಟಿಗೆ ಎಂದು ಕರೆಯುತ್ತಾರೆ. ಇನ್ನೂ ಕೆಲವು ಕಡೆ ಈ ಹಬ್ಬವನ್ನು ಅವಂಟಿಗೋ ಪವಂಟಿಗೋ, ಆಡಿ ಪಿಡೀ, ಅಂಟಿ ಸುಂಟಿ, ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಹಳ್ಳಿಯ ದನಗಾಹಿ ಯುವಕರು ದನಗಳ ಮುಖ್ಯ ಆಹಾರವಾದ ಹುಲ್ಲಿನಿಂದ ಗೂಡು ಮಾಡಿ, ಗೂಡಿನಲ್ಲಿ ದೀವಿಗೆಯನ್ನಿಟ್ಟು ರಾತ್ರಿಯಲ್ಲಿ ಮನೆ ಮನೆಗೆ ತಿರುಗಿ ದನಗಳ ಕುರಿತು ಆಣೀ ಪೀಣಿ ಗೀತೆಗಳನ್ನು ಹೇಳುತ್ತ ಬೆಳಗಿ ಪ್ರತಿಫಲವಾಗಿ ದೀಪಕ್ಕೆ ಎಣ್ಣೆ, ಹಣ, ಕೊಬ್ಬರಿ ಪಡೆದುಕೊಳ್ಳುವುದಿದೆ. ಮನೆಯಿಂದ ಹೊರಡುವಾಗ ಆ ಮನೆಯ ದನ, ಕರು, ಬೆಳೆ, ಬೇಸಾಯಗಳಿಗೆ ಒಳ್ಳೆಯದಾಗಲೆಂದು ಹಾರೈಸಿ ಮುಂದಿನ ಮನೆಗೆ ತೆರಳುತ್ತಾರೆ. ಆಣೀ ಪೀಣಿ ಹಾವಿನ ಹೆಡೆ ಆಕಾರದ ಹುಲ್ಲಿನ ಹೆಣಿಕೆಯಿಂದ ಕೂಡಿರುತ್ತದೆ. ಗಣಜಲಿ ಹುಲ್ಲಿನಿಂದ, ಹಳ್ಳದಲ್ಲಿನ ಆಪದಿಂದಲೂ ಹೆಣೆಯುತ್ತಾರೆ. ಹುಲ್ಲಿನಿಂದ ತಯಾರಿಸಲಾದ ಈ ಪರಿಕ್ರ ಮಕ್ಕೆ 'ಗೊಗ್ಗೆ' ಎಂದು ಕರೆಯುತ್ತಾರೆ. ಹೆಡೆಗಳ ಮಧ್ಯದಲ್ಲಾಗಲಿ, ಗೂಡಿನ ಮಧ್ಯದಲ್ಲಾಗಲಿ ಬೆಳಗುವ ದೀಪವನ್ನಿಟ್ಟಿರುತ್ತಾರೆ. ಮೊದಲ ದಿನ ಹಾವಿನ ಹೆಡೆ ಒಂದಾದರೆ ನಂತರದ ಐದನೆಯ ದಿನಗಳಿಗೆ ಸರತಿಯಂತೆ ಹೆಡೆಗಳನ್ನು ಮಾಡಿ ಏಳನೆಯ ಹೆಡೆಯ ಹಾವು ಪ್ರತಿ ಮನೆಗೂ ಬರಲೆಂದು ಎರಡು ದಿನಗಳವರೆಗೆ ಬೆಳಗುವದಿದೆ. ಪ್ರತಿ ಮನೆಗೂ ಸಾಗಿ ಬೆಳಗುವಾಗ ಪೀಡೆಯನ್ನು ದೂರ ಮಾಡುವ ಆಣೀ ಪೀಣಿ ಹಾಡುಗಳನ್ನು ಹಾಡುತ್ತಾರೆ.

ಅರಸನ ಕೈಯಾಗ, ಬೆಳ್ಳಿಯ ಕುಡಗೋಲ, ಬೆಳ್ಳಿಯ ಕುಡಗೋಲಿಗಿ ಮಾರ ಮಾರ ಹುಲ್ಲ, ಮಾರ ಮಾರ ಹುಲ್ಲಿಗಿ ಗೆಜ್ಜಿ ಕಟ್ಟಿದೆಮ್ಮಿ, ಗೆಜ್ಜಿ ಕಟ್ಟಿದೆಮ್ಮಿಗಿ ಸರ್ ಬುರ್ ಹಾಲು, ಸರ್ ಬುರ್ ಹಾಲಿಗೆ ಕೆನಿ ಕೆನಿ ಮಸರು, ಕೆನಿ ಕೆನಿ ಮಸರಿಗಿ ಗಮ್ ಗಮ್ ತುಪ್ಪ, ಗಮ್ ಗಮ್ ತುಪ್ಪಕ್ಕ ಬಳಕೊ ರೊಕ್ಕ ..... ಪೀಡೆ ಹೋಗಲಾಡಿಸುವುದೇ ಮೂಲ ಆಶಯವನ್ನಾಗಿಟ್ಟುಕೊಂಡ ಈ ಗೀತೆಗಳು ಕೆಲವು ಬಾರಿ ಮನರಂಜನೆಯಿಂದಲೂ ಕೂಡಿರುತ್ತವೆ.

ಹಂಡಾಕಳಾ ಬಂಡಾಕಳಾ, ಕನಕಪ್ಪನ ಕರಿ ಆಕಳಾ, ಗುಡ್ಡಾ ವೇರಿ ಬರುವಾಗ ಕಳ್ಳಾರು ಕಂಡಾರೂ, ಕಳ್ಳರ ಕೈಯಾಗ ಬೆಳ್ಳಿಯ ಕುಡಗೋಲು, ಬೆಳ್ಳಿಯ ಕುಡಗೋಲು ಮಾರ ಮಾರ ಹುಲ್ಲು, ಮಾರ ಮಾರ ಹುಲ್ಲಿಗೆ ಬೋರ ಬೋರ ಹಾಲು, ಬೋರ ಬೋರ ಹಾಲಿಗೆ ಕಣ್ಣಿ ಕಣ್ಣಿ ಮೊಸರು, ಕಣ್ಣಿ ಕಣ್ಣಿ ಮಸರಿಗಿ ಕಳ ಕಳ ತುಪ್ಪ, ಕಳ ಕಳ ತುಪ್ಪಕ್ಕ ಬಳಾ ಬಳಾ ರೊಕ್ಕ ಆಣೀ ಪೀಣಿ ಜಾಣೆಗೊ, ನಿಮ್ಮ ಎತ್ತಿನ ಪೀಡಾ ಹೊಳೆಯಾಚಕೊ...ಹೀಗೆ ಹಾಡುತ್ತಾ ದನ, ಕರು, ಪಕ್ಷಿ, ಮನೆ, ಹೊಲ, ಹುಡುಗ, ದೇವರು ಮುಂತಾದವುಗಳ ಹೆಸರೆತ್ತಿ ದೀಪ ಬೆಳಗುತ್ತಾರೆ. ಇಲ್ಲಿ ದನಗಳಿಗೆ ಹೆಚ್ಚಿನ ಆದ್ಯತೆ ದೊರೆಯುತ್ತದೆ. ತಂಡವಾಗಿ ಸಾಗುವ ಈ ಆಚರಣೆಯಲ್ಲಿ ಐದಾರು ಯುವಕರಿರುತ್ತಾರೆ. ಅಲ್ಲದೇ ಕೇರಿಗೊಂದರಂತೆ ತಂಡಗಳು ಹುಟ್ಟಿಕೊಳ್ಳುತ್ತವೆ. ಹೊರಬಿದ್ದ ತಂಡಗಳು ದೀಪಗಳು ಒಂದಕ್ಕೊಂದು ಎದುರಾಗಬಾರದೆಂದು, ದೀಪ ಶಾಂತವಾಗಬಾರದೆಂದು ನಂಬಿಕೆ ಇದೆ. ಒಕ್ಕಲು ಮಕ್ಕಳ ಈ ಆಚರಣೆ ಇಂದು ಆಧುನಿಕ ಸಂದರ್ಭದಲ್ಲಿ ಮರೆಯಾಗುತ್ತಿದೆ. ಇಂಥ ಜನಪದರ ಆಚರಣೆಗಳು ಉಳಿದು ಬೆಳಗಬೇಕಿದೆ. ನಾಳಿನ ಪೀಳಿಗೆಗೆ ಇದು ತಿಳಿಯಬೇಕಿದೆ.



ಲೇಖಕ: ಡಾ.ಪ್ರಕಾಶ ಖಾಡೆ
ಬಾಗಲಕೋಟೆ, 9845500890









# ಹುಮನಾಬಾದ್ ಪುರಸಭೆ: ಸ್ವಚ್ಛತೆಯೆ ಪುರಸಭೆಯ ಪ್ರಥಮ ಆದ್ಯತೆ: ಮುಖ್ಯಾಧಿಕಾರಿ ಶ್ರೀಮತಿ ವನಿತಾಬಾಯಿ



ಹುಮನಾಬಾದ್ ಪುರಸಭೆಯ ಮುಖ್ಯಾಧಿಕಾರಿಶ್ರೀಮತಿವನಿತಾಬಾಯಿ ಅವರು ಹೇಳಿದ್ದಾರೆ "ನಗರದ ಅಭಿವೃದ್ಧಿಗೆ ಅಧಿಕಾರಿಗಳು ಮಾತ್ರವಲ್ಲ, ನಾಗರಿಕರು ಹಾಗೂ ಜನಪ್ರತಿನಿಧಿಗಳ ಸಹಕಾರವೂ ಅತ್ಯಂತ ಅಗತ್ಯ."

ಅವರು ಹೇಳಿದರು, ನಗರವನ್ನು ಮಾದರಿನಗರವಾಗಿರೂಪಿಸುವುದು ನಮ್ಮ ಗುರಿ, ಅದಕ್ಕಾಗಿ ಎಲ್ಲರ ಸಹಭಾಗಿತ್ವಅಗತ್ಯ. ಜನರು ಸ್ವಚ್ಛತೆ, ತೆರಿಗೆ ಪಾವತಿ ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಹಕರಿಸಿದರೆ ಹುಮನಾಬಾದ್ ಶೀಘ್ರದಲ್ಲೇ ಅಭಿವೃದ್ಧಿಯ ಮಾರ್ಗದಲ್ಲಿ ಮುನ್ನಡೆಯಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ನಗರದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿದ ನಂತರ ಮಾತನಾಡಿದ ಅವರು, ಪುರಸಭೆ ಸಿಬ್ಬಂದಿ ಶ್ರಮದಿಂದ ಕೆಲಸ ಮಾಡುತ್ತಿರುವುದಾಗಿ ಹಾಗೂ ನಗರ ಸುಂದರೀಕರಣಕ್ಕೆ ವಿಶೇಷ ಯೋಜನೆ ರೂಪಿಸಲಾಗಿದೆ ಎಂದರು.

**ಶೀರ್ಷಿಕೆ:**

ಹುಮನಾಬಾದ್ ಅಭಿವೃದ್ಧಿಯ ಹೊಸ ಹೆಜ್ಜೆಗಳು ಮಾದರಿ ನಗರ ಗುರಿ

ಹುಮನಾಬಾದ್ ನಗರವು ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯ ಹೊಸ ಹಾದಿಯತ್ತ ಹೆಜ್ಜೆ ಇಡುತ್ತಿದೆ. ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ ವನಿತಾಬಾಯಿ ಅವರ ನೇತೃತ್ವದಲ್ಲಿ ನಗರವನ್ನು ಮಾದರಿ ನಗರವನ್ನಾಗಿ ಪರಿವರ್ತಿಸಲು ಹಲವು ಯೋಜನೆಗಳು ಜಾರಿಗೆ ಬರುತ್ತಿವೆ.


**ನಗರ ಅಭಿವೃದ್ಧಿಗೆ ಪ್ರಮುಖ ಯೋಜನೆಗಳು:**



1. ಮೂಲಸೌಕರ್ಯ ಅಭಿವೃದ್ಧಿ: ರಸ್ತೆ, ಒಳಚರಂಡಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಸುಧಾರಣೆ ಕಾರ್ಯಗಳು ವೇಗವಾಗಿ ನಡೆಯುತ್ತಿವೆ.




2. ಸ್ವಚ್ಛತಾ ಅಭಿಯಾನ: ಸ್ವಚ್ಛ ಹುಮನಾಬಾದ್‌ಗಾಗಿ ಪ್ರತೀ ವಾರ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ. ನಾಗರಿಕರಿಂದ ಸಹಕಾರದ ನಿರೀಕ್ಷೆಯಿದೆ.



3. ವಿದ್ಯುತ್ ಮತ್ತು ಬೆಳಕಿನ ವ್ಯವಸ್ಥೆ: ನಗರದ ಪ್ರಮುಖ ರಸ್ತೆಗಳು ಮತ್ತು ಉದ್ಯಾನವನಗಳಲ್ಲಿ ಎಲ್‌ಇಡಿ ದೀಪಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ.



4. ಪರಿಸರ ಸಂರಕ್ಷಣೆ: ಹಸಿರು ಹುಮನಾಬಾದ್ ಗುರಿಯಿಂದ ನೂರಾರು ಸಸಿ ನೆಡಲಾಗಿದ್ದು, ಉದ್ಯಾನಗಳು ನವೀಕರಣ ಹಂತದಲ್ಲಿವೆ.




5. ಸಾಮಾಜಿಕ ಸೌಲಭ್ಯಗಳು: ಬಡವಸತಿ ಪ್ರದೇಶಗಳಲ್ಲಿ ಶೌಚಾಲಯ, ಕುಡಿಯುವ ನೀರು ಮತ್ತು ಕಸದ ವಿಲೇವಾರಿ ವ್ಯವಸ್ಥೆಗೆ ಪ್ರಾಮುಖ್ಯತೆ.


## ಮುಖ್ಯಾಧಿಕಾರಿ ವನಿತಾಬಾಯಿ ಅವರ ಅಭಿಪ್ರಾಯ:

**"ನಗರದ ಅಭಿವೃದ್ಧಿ ಸರ್ಕಾರದ ಯೋಜನೆಗಳಷ್ಟೇ ಅಲ್ಲ, ನಾಗರಿಕರ ಸಹಕಾರವೂ ಅತಿ ಮುಖ್ಯ. ಎಲ್ಲರು ಸೇರಿ ಕೆಲಸ ಮಾಡಿದರೆ ಹುಮನಾಬಾದ್ ನಿಜಕ್ಕೂ ಮಾದರಿ ನಗರವಾಗುತ್ತದೆ," ಎಂದು ಅವರು ತಿಳಿಸಿದ್ದಾರೆ.**

**ಸಾರಾಂಶ:**

**ಹುಮನಾಬಾದ್ ನಗರವು ಅಭಿವೃದ್ಧಿಯ ಹೊಸ ಯುಗಕ್ಕೆ ಕಾಲಿಡುತ್ತಿದೆ. ಪುರಸಭೆ ಹಾಗೂ ಜನರ ಒಟ್ಟಿನ ಪ್ರಯತ್ನದಿಂದ ಮುಂದಿನ ದಿನಗಳಲ್ಲಿ ಹುಮನಾಬಾದ್ ಸ್ವಚ್ಛ, ಹಸಿರು ಹಾಗೂ ಆಧುನಿಕ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗುವ ನಿರೀಕ್ಷೆಯಲ್ಲಿ**









# ಮಾಜಿ ಸಚಿವ ರಾಜಶೇಖರ ಪಾಟೀಲ ಹುಮನಾಬಾದ್ ಅಭಿವೃದ್ಧಿಯ ಹರಿಕಾರರು



ಹುಮನಾಬಾದ್:

ಹುಮನಾಬಾದ್ ಕ್ಷೇತ್ರದ ಅಭಿವೃದ್ಧಿಯ ಹೆಸರನ್ನು ಉಲ್ಲೇಖಿಸಿದಾಗ

ಮೊದಲಿಗರಾಗಿ

ನೆನಪಾಗುವವರು ಮಾಜಿ ಸಚಿವ ರಾಜಶೇಖರ ಪಾಟೀಲ ರವರು. ತಮ್ಮ ರಾಜಕೀಯ ಬದುಕಿನಲ್ಲಿ ಅವರು ಜನಪರ ನಿಲುವು, ಸತ್ಯನಿಷ್ಠ ಆಡಳಿತ ಹಾಗೂ ನಿರಂತರ ಅಭಿವೃದ್ಧಿ ಚಟುವಟಿಕೆಗಳ ಮೂಲಕ ಕ್ಷೇತ್ರದ ಜನಮನ ಗೆದ್ದಿದ್ದಾರೆ. ರಾಜಶೇಖರ ಪಾಟೀಲ ರವರು ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿ, ರಸ್ತೆ, ಒಳಚರಂಡಿ, ಕುಡಿಯುವ ನೀರಿನ ಯೋಜನೆಗಳು, ಆಸ್ಪತ್ರೆ ಹಾಗೂ ಶಾಲೆಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ರೈತರಿಗೆ ನೆರವಾಗುವ ಹಲವಾರು ಯೋಜನೆಗಳನ್ನು ತರಲು ಮತ್ತು ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸದಾ ಮುಂದಾಗಿದ್ದಾರೆ. ಹುಮನಾಬಾದ್ ಪಟ್ಟಣದ ಸುಧಾರಣೆಗೆ ನಗರಾಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಿಗೂ ಸಮಾನ ಪ್ರಾಮುಖ್ಯತೆ ನೀಡುವಲ್ಲಿ ಅವರು ತೋರಿದ ದೃಢಸಂಕಲ್ಪ ಜನಪ್ರಿಯತೆಯ ಪ್ರಮುಖ ಕಾರಣವಾಗಿದೆ ಸಾಮಾಜಿಕ ಕ್ಷೇತ್ರದಲ್ಲಿಯೂ ರಾಜಶೇಖರ ಪಾಟೀಲ ರವರು ಶ್ರದ್ಧೆ ಮತ್ತು ಸೇವಾಭಾವದಿಂದ ಹಲವು ಕಲ್ಯಾಣ ಯೋಜನೆಗಳನ್ನು ಕೈಗೊಂಡು ಬಡಜನರ ಆಶಾಕಿರಣವಾಗಿದ್ದಾರೆ. ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸಿ ಪರಿಹರಿಸುವ ಶೈಲಿ ಅವರ ಜನಪರ ಮುಖವನ್ನೆತ್ತಿ ತೋರಿಸಿದೆ. ಹುಮನಾಬಾದ್ ಕ್ಷೇತ್ರದ ಜನತೆ ಇಂದು ಹೇಳುತ್ತಾರೆ "ರಾಜಶೇಖರ ಪಾಟೀಲ ರವರೇ ಅಭಿವೃದ್ಧಿಯ ಹರಿಕಾರರು"

## ನನ್ನಾಕೆ.......



ಗುಳಿ ಕೆನ್ನೆ ಹುಡುಗಿ ನನ್ನಾಕೆ ಬೆಡಗಿ
ನಕ್ತಾಳೆ ನೋಡಿ ಕಣ್ಸನ್ನೆ ಮಾಡಿ
ಒಲವಲ್ಲೆ ಸೆಳೆದು ನೋವೆಲ್ಲ ಕಳೆದು
ಹಂಚತ್ತಾಳೆ ಪ್ರೀತಿಯ ಹನಿಹನಿಯಾ

ಅವಳೊಂದು ಸುಂದರ ನೆನಪು
ಅವಳಿಂದ ಮುಂದಿನ ಬದುಕು
ಅವಳಿಗೆ ನನ್ನಯ ಪ್ರೀತಿಯು ಮುಡಿಪು

ಎಲ್ಲಿ ಮೂಡಿತೊ ಪ್ರೀತಿ. ಹೇಗೆ ಹಬ್ಬಿತೋ
ನಾಕಾಣೆ..
ಪ್ರೀತಿ ಮೂಡಿದ್ದು ನಿಜ ಹಬ್ಬಿದ್ದು ನಿಜ ನಿನ್ನ
ಚೆಲುವಿನಾಣೆ.

ಸಂಚು ಮೂಡಿಸಿದೆ ನಿನ್ನ ಕಣ್ಣಂಚಲಿ
ಕೊಲ್ಮಿಂಚು ಬರಸೆಳೆದಿದೆ ನಿನ್ನ ಸಂಚಲಿ
ಬೇಗ ಬರು ಗೆಳತಿ ಬಾಳಲಿ....












# ಬೆಳಕಿನ ಹಬ್ಬ ದೀಪಾವಳಿ




ಭಾರತೀಯರಿಗೆ ಭಾಗ್ಯತರುವ ಹಬ್ಬ ದೀಪಾವಳಿ. ದೀಪ ಪ್ರಕಾಶದ, ಜ್ಞಾನದ ಸಂಕೇತ. ಅಜ್ಞಾನವೆಂಬ ಕತ್ತಲನ್ನು ಹೊಡೆದೋಡಿಸಲು ಜ್ಞಾನವೆಂಬ ದೀಪ(ಪ್ರಕಾಶ) ಅವಶ್ಯಕ. ಆದ್ದರಿಂದಲೇ 'ನಹಿ ಜ್ಞಾನೇನ ಸದೃಶಂ'(ಜ್ಞಾನಕ್ಕೆ ಸಮನಾದುದು ಯಾವುದೂ ಇಲ್ಲ) 'ಜ್ಞಾನ ವಿನಃ ಪಶು:'(ಜ್ಞಾನವಿಲ್ಲದವನು ಪಶು) ಎನ್ನಲಾಗುತ್ತದೆ. ಅಜ್ಞಾನದ ಕತ್ತಲನ್ನು ದೂರ ಮಾಡಿ ಜ್ಞಾನದ ಬೆಳಕನ್ನು ಬೀರುವುದೇ ದೀಪಾವಳಿಯ ಸತ್ಯಾರ್ಥ. ಆದ್ದರಿಂದ ಪ್ರತಿ ಮನೆ-ಮನೆಯಲ್ಲೂ ಪ್ರತಿಯೊಬ್ಬನ ಮನ-ಮನದಲ್ಲೂ ಜ್ಞಾನವೆಂಬ ದೀಪವು ನಿರಂತರವಾಗಿ ಬೆಳೆಯುತ್ತಿರಲಿ ಎಂಬುದೇ ದೀಪಾವಳಿ ಹಬ್ಬದ ಮೂಲ ಸಂದೇಶವಾಗಿದೆ.

ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನ ಸಂಪದಾ !
ಶತ್ರುಬುದ್ಧಿ ವಿನಾಶಾಯ ದೀಪ ಜ್ಯೋತಿರ್ ನಮೋಸ್ತುತೇ !!

ದೀಪದ ಬೆಳಕಿಗೆ ನಮಸ್ಕಾರಗಳು, ಇದು ದ್ವೇಷದ ಭಾವನೆಗಳನನು ನಾಶಪಡಿಸುತ್ತದೆ. ಮತ್ತು ಮಂಗಳಕರತೆ, ಆರೋಗ್ಯ ಮತ್ತು ಸಮೃದ್ಧಿಯನ್ನು ತರುತ್ತದೆ. ದೀಪದ ಬೆಳಕಿಗೆ ನಮಸ್ಕಾರಗಳು.

ಇದರ ನೀಜ ಅರ್ಥ ನಾವು ಆತ್ಮಜ್ಯೋತಿ ಚೈತನ್ಯ ದೀಪವೆಂದು ತಿಳಿದು ದ್ವೇಷ, ತಿರಸ್ಕಾರದ ಭಾವನೆಗಳನ್ನು ನಾಶಮಾಡಿದಾಗ ನಮ್ಮ ಆರೋಗ್ಯ ಮತ್ತು ಜೀವನ ಸಮೃದ್ಧವಾಗುತ್ತದೆ.

ದೀಪಜ್ಯೋತಿ: ಪರಬ್ರಹ್ಮ ದೀಪ ಜ್ಯೋತಿರ್ ಜನಾರ್ದನ: !
ದೀಪೋ ಹರತು ಮೇ ಪಾಪಂ ದೀಪ-ಜ್ಯೋತಿರ್ ನಮೋಸ್ತುತೇ !!

ದೀಪದ ಬೆಳಕಿಗೆ ನಮಸ್ಕಾರ, ಪರಬ್ರಹ್ಮ ಜನಾರ್ದನ

ದೀಪದ ಬೇಳಕು ನನ್ನ ಪಾಪಗಳನ್ನು ತೆಗೆದು ಹಾಕಲಿ. ದೀಪದ ಬೆಳಕಿಗೆ ನಮಸ್ಕಾರಗಳು.

ನಮಗೆ ದೀಪದ ಮಹತ್ವವನ್ನು ಸಾರಿ ಹೇಳುತ್ತದೆ, ನಾವುಗಳು ಜ್ಯೋತಿಆಗಿ ಪರಮಜ್ಯೋತಿ ಪರಮಾತ್ಮನ ನೆನಪು ಮಾಡಿದಾಗ ನಮ್ಮ ಪಾಪಗಳು ಭಸ್ಮವಾಗುವುದು.

ಪ್ರತಿಒಂದು ಹಬ್ಬಗಳ ಹಿನ್ನೆಲೆಯಲ್ಲಿ ಬಹಳ ಉನ್ನತವಾದ ಆಧ್ಯಾತ್ಮಿಕ ರಹಸ್ಯ ಅಡಗಿದೆ. ನಮ್ಮ ಹಿರಿಯರು ಪ್ರತಿ ಹಬ್ಬಕ್ಕೂ ಅದ-ಕ್ಕೆ ಸರಿಹೊಂದುವಂತೆ ಒಂದು ಪುರಾಣ, ಪುಣ್ಯಕಥೆಯನ್ನು ಬೆಸೆದು ಹಬ್ಬಕ್ಕೆ ಮೆರಗು ಹಾಕಿದ್ದಾರೆ. ಆದರೆ ಅದು ಕ್ರಮೇಣವಾಗಿ ಆಧ್ಯಾತ್ಮಿಕತೆಯ ಅರ್ಥ ಕಳೆದುಕೊಂಡು ತನ್ನ ಸೊಬಗನ್ನು ಕಳೆದುಕೊಳ್ಳುತ್ತಿದೆ. ಏಕೆಂದರೆ ಮಾನವನು ಹಬ್ಬಗಳ ಅಲೌಕಿಕ ಅರ್ಥವನ್ನು ತೆಗೆದುಕೊಳ್ಳದೇ ಕೇವಲ ಸ್ಥೂಲ ರೂಪದಲ್ಲಿ ಆಚರಿಸುತ್ತಿರುವುದರಿಂದ ಅಲೌಕಿಕ ಸಂತೋಷದ ಅನುಭವವಾಗುತ್ತಿಲ್ಲ.

ಕಾರ್ತಿಕ ಅಮವಾಸ್ಯೆಗೆ ಭಾರತದ ಪ್ರತಿಯೊಂದು ಮನೆಯಲ್ಲಿ ದೀಪಗಳನ್ನು ಬೆಳಗಿಸಿ ಅಬಾಲ ವೃದ್ಧರೂ ಸಂತೋಷ ಪಡುತ್ತಾರೆ. ಎಲ್ಲರೂ ತಮ್ಮ ತಮ್ಮ ಮನೆ, ಗುಡಿ ಗುಂಡಾರಗಳನ್ನು ಶುಚಿ ಗೊಳಿಸಿ, ಬಣ್ಣಗಳಿಂದ ಶೃಂಗರಿಸುತ್ತಾರೆ. ದೀಪಾವಳಿ ಭಾರತೀಯರ ಒಂದು ದೊಡ್ಡ ಹಬ್ಬ. 'ಅವಳಿ' ಎಂದರೆ ಮಾಲೆ, ಸಾಲು ಎಂದರ್ಥ. ಹಬ್ಬದ ದೃಷ್ಟಿಯಿಂದ ನೋಡಿದರೆ ದೀಪಾವಳಿ ದೀಪಗಳ ಸಾಲಿನಂತೆ ಹಬ್ಬಗಳ ಸಾಲೂ ಹೌದು. ನೀರು ತುಂಬುವ ಹಬ್ಬದಿಂದ ಆರಂಭವಾಗಿ ನರಕಚತುರ್ದಶಿ, ಧನತೇರಸ, ಬಲಿಪಾಡ್ಯಮಿ, ಭಾವನಬಿದಿಗೆ, ಅಕ್ಕನ ತದಿಗೆ, ಪಂಚಮಿಯ ವರೆಗೆ ಪ್ರತಿದಿನವೂ ಹಬ್ಬ. ದೀಪಗಳ ಸಾಲ ಅಂದರೇ ವಿದ್ಯುತ ದೀಪಗಳ ಮಾಲೆ ಅಥವಾ ಹಚ್ಚುವುದು ವಾಡಿಕೆ. ಗುಡಿಯ ಮುಂದೆರುವ ದೀಪಸ್ತಂಭ ಪ್ರಜ್ವಲಿಸುವುದು. ವಿದ್ಯುತ ದೀಪಗಳ ಮಾಲೆಯಿಂದ ಮನೆಗಳ ಶೃಂಗಾರ ಮಡುತ್ತಾರೆ. ಪಣತಿಯಲ್ಲಿ ದೀಪ ಬೇಳಗಿಸಿ, ಒಂದು ದೀಪದಿಂದ ಇನ್ನೊಂದು ದೀಪ ಹಚ್ಚುತ್ತಾರೆ. ವ್ಯಾಪಾರಸ್ಥರು ತಮ್ಮ ಹಳೆ ಖಾತೆಗಳನ್ನು ಮುಕ್ತಾಯ ಮಾಡಿ ಹೊಸ ಖಾತೆಯನ್ನು ಪ್ರಾರಂಭ ಮಾಡುತ್ತಾರೆ. ಧನ ದೇವತೆ 'ಲಕ್ಷ್ಮೀ' ಯನ್ನು ಇದೇ ಸಮಯದಲ್ಲಿ ಆವಾಹನೆ ಮಾಡಿ ಪೂಜಿಸಲಾಗುತ್ತದೆ.

ದೀಪಾವಳಿ ಬೆಳಕಿನ ಹಬ್ಬವಾಗಿದ್ದು ದೀಪಗಳಿಗೆ ಈ ಹಬ್ಬದಲ್ಲಿ ವಿಶೇಷ ಮಹತ್ವ ಇದೆ. ದೀಪದಾನವು ಈ ಹಬ್ಬದಲ್ಲಿ ಮಾಡುವ ವಾಡಿಕೆ ಇದೆ. ಸ್ಥೂಲ ದೀಪದ ಜೊತೆಗೆ ಆತ್ಮಜ್ಯೋತಿಯನ್ನು ಬೆಳಗಿಸಿದರೆ ನಮ್ಮ ಜೀವನ ಪರಿಪೂರ್ಣ ವಾಗುತ್ತದೆ. ಪ್ರತಿ ಒಂದು ಹಬ್ಬಕ್ಕೆ ತನ್ನದೇ ಆದ ಹಿನ್ನಲೆ ಇದ್ದು, ಅಧ್ಯಾತ್ಮಿಕ ರಹಸ್ಯವನ್ನು ತಿಳಿಸಿಕೊಡುವುದರ ಜೊತೆಗೆ ಅದನ್ನು ತಮ್ಮ ನಿತ್ಯ ಜೀವನದಲ್ಲಿ ಸಹಜವಾಗಿ ಹೇಗೆ ಅಳವಡಿಕೊಳ್ಳುಬೇಕು ಎನ್ನುವುದನ್ನು ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಹೇಳಲಾಗುತ್ತದೆ. ಅಜ್ಞಾನದ ಕತ್ತಲೆಯಿಂದ ಸತ್ಯ ಜ್ಞಾನದ ಬೆಳಕವನ್ನು ನಾವು ಪಡೆದರೆ ನಮ್ಮ ಈ ಮಾನವ ಜನ್ಮ ಸಾರ್ಥಕ.

ದೀಪಾವಳಿಯ 'ಬಲಿ' ರಾಜಾ ಮತ್ತು ನರಕಾಸುರನ ಎರಡು ಕಥೆಗಳು ಲಾಕ್ಷಣಿಕ ಭಾಷೆಯ ರೂಪದಲ್ಲಿ ವರ್ಣನೆ ಮಾಡಲಾಗಿದೆ. ಈಶ್ವರೀಯ ಜ್ಞಾನದ ದೃಷ್ಟಿಯಲ್ಲಿ ನೊಡಿದಾಗ 'ನರಕಾಸುರ' ಮಾಯೆ ಅಥವಾ ಮನೋವಿಕಾರಗಳ ರೂಪವಾಗಿದೆ. ಕಾಮ, ಕ್ರೋಧ, ಲೋಭ, ಮೋಹ, ಹಾಗೂ ಅಹಂಕಾರಗಳು ಆಸುರಿ ಲಕ್ಷಣಗಳು ಮತ್ತು ನರಕದ ದ್ವಾರ ಆಗಿವೆ. ಈ ವಿಕಾರಗಳನ್ನು ಜಯಿಸುವುದು ಎಂದರೆ 'ಬಲಿ' ಕೊಡುವುದು ಎಂದು ಹೇಳಲಾಗುತ್ತದೆ. ವಿಶ್ವದ ಇತಿಹಾಸದಲ್ಲಿ ನಾಲ್ಕು ಯುಗಗಳು ಇವೆ. ಸತ್ಯಯುಗ, ತ್ರೆತಾಯುಗ, ದ್ವಾಪರಯುಗ, ಮತ್ತು ಕಲಿಯುಗ. ಈ ಕಲಿಯುಗದ ಅಂತಿಮ ಸಮಯವು ಪಂಚವಿಕಾರ ಮತ್ತು ಆಸುರಿಗುಣಗಳ ಸಾಮ್ರಾಜ್ಯದ ಸಮಯವಾಗಿದೆ. ಪ್ರತಿಯೊಬ್ಬ ನರ-ನಾರಿಯರ ಮನಸ್ಸಿನ ಮೇಲೆ ವಿಕಾರಗಳ ರಾಜ್ಯ ಇದೆ. ಇದಕ್ಕೆ 'ನರಕಾಸುರ" ಅಥವಾ 'ರಾಜಾಬಲಿಯ" ಅಧಿಪತ್ಯ ಎಂದು ಹೇಳಲಾಗುತ್ತದೆ. ಭಾರತವು ಸತ್ಯಯುಗದಲ್ಲಿ ಸ್ವರ್ಗವಾಗಿತ್ತು ಅಲ್ಲಿನ ಮನುಷ್ಯರೆಲ್ಲರು ದೇವಿ-ದೇವತೆಗಳಾಗಿದ್ದರು. ಅವರೇ ಜನ್ಮ ಮರಣದ ಚಕ್ರದಲ್ಲಿ ಬರುತ್ತಾ ಈಗ ನರಕದಲ್ಲಿ 'ನರಕಾಸುರ' ಅಥವಾ 'ಬಲಿ'ಯ ಅಧೀನರಾಗಿದ್ದಾರೆ. ಆತ್ಮಜ್ಞಾನ ಹಾಗೂ ನಿರಾಕಾರ ಶಿವನ ಧ್ಯಾನದಿಂದ ನಾವು ಪುನಃ ಬಂಧನಮುಕ್ತರಾಗಲು ಸಾಧ್ಯವಿದೆ.

ಆತ್ಮಜ್ಞಾನ ಎಂದರೆ ಆತ್ಮದೀಪವನ್ನು ಬೆಳಗಿಸುವುದು. 'ನಾನು ಒಂದು ಜ್ಯೋತಿ, ಜಾತಿ ಇಲ್ಲದ

ಅತಿಸೂಕ್ಷ್ಮ ಆತ್ಮಜ್ಯೋತಿ. ಶರೀರದ ಹಣೆಯ ಮಧ್ಯದಲ್ಲಿ ಹೊಳೆಯುವ ಚೈತನ್ಯ ಜ್ಯೋತಿ, ದೇಹ ಎಂಬ ರಥದ ಸಾರಥಿ ನಾನು ಆತ್ಮ. ದೇಹದ ಮೂಲಕ ಈ ಸೃಷ್ಟಿ ನಾಟಕದಲ್ಲಿ ಪಾತ್ರ ಅಭಿನಯಿಸುವ ಪಾತ್ರಧಾರಿ ನಾನು. ಈ ರೀತಿ ನಿತ್ಯಚಿಂತನೆ ಮಾಡಬೇಕು. ಇದನ್ನೇ ಆತ್ಮಾನುಭೂತಿ ಎಂದು ಕರೆಯಲಾಗುತ್ತದೆ.






# ಇವೇ ನೋಡಿ ಕೆಂಪು ಹಾಗೂ ಹಸಿರು ಪಟಾಕಿ ನಡುವಿನ ವ್ಯತ್ಯಾಸ, ಆರೋಗ್ಯದ ವಿಚಾರದಲ್ಲಿ ಹುಷಾರು!

ಕಲಬುರಗಿ: ದೀಪಾವಳಿಯ ಸಮಯದಲ್ಲಿ ಮಾಲಿನ್ಯದ ಬಗ್ಗೆ ಕಾಳಜಿ ವಹಿಸುವ ಸಲುವಾಗಿ, ಸುಪ್ರೀಂ ಕೋರ್ಟ್ ದೆಹಲಿ–ಎನ್‌ಸಿಆರ್‌ನಲ್ಲಿ ಹಸಿರು ಪಟಾಕಿಗಳ ಬಳಕೆಯನ್ನು ಅನುಮೋದಿಸಿದೆ. ಆದರೆ ಈ ಹಸಿರು ಪಟಾಕಿಗಳು ಯಾವುವು ಮತ್ತು ಅವು ಸಾಮಾನ್ಯ ಪಟಾಕಿಗಳಿಗಿಂತ ಎಷ್ಟು ಭಿನ್ನವಾಗಿವೆ ಎಂದು ನಿಮಗೆ ತಿಳಿದಿದೆಯೇ?

ವರ್ಷಕ್ಕೆ ಒಂದು ಬಾರಿ ಬರುವ ದೀಪಾವಳಿ ಹಬ್ಬ ಅಂದರೆ ಬೆಳಕಿನ ಹಬ್ಬ ಭಾರತದಾದ್ಯಂತ ಖುಷಿ ಮತ್ತು ಸಂಭ್ರಮದಿಂದ ಆಚರಿಸಲ್ಪಡುತ್ತದೆ. ಇನ್ನು ದೀಪಾವಳಿ ಹಬ್ಬ ಎಂದರೆ ನೆನಪಿಗೆ ಬರುವುದು ಜಗಮಗಿಸುವ ದೀಪಗಳು, ಬಗೆಬಗೆಯ ಸಿಹಿ ತಿಂಡಿಗಳು, ಇದರ ಜೊತೆಗೆ ಪಟಾಕಿಗಳು.

ಹೇಳಿಕೇಳಿ ದೀಪಾವಳಿ ಹಬ್ಬ ಎಂದರೆ ಅದು ದೀಪಗಳ ಹಾಗೂ ಪಟಾಕಿಗಳ ಹಬ್ಬ. ಈ ಹಬ್ಬದ ದಿನದಂದು, ದೀಪಗಳಿಗೆ ಎಷ್ಟು ಮಹತ್ವ ಇರುತ್ತದೆಯೋ ಅಷ್ಟೇ ಮಹತ್ವವನ್ನು ಪಟಾಕಿಗಳಿಗೆ ಕೂಡ ಕೊಡುತ್ತಾರೆ! ಎಷ್ಟೇ ದುಬಾರಿಯಾದರೂ ಕೂಡ ಪಟಾಕಿಗಳನ್ನು ಸಿಡಿಸಿ ಸಂಭ್ರಮ ಪಡುತ್ತಾರೆ



ಅನ್ಯಾಯದ ವಿರುದ್ಧ ಧ್ವನಿ ಎತ್ತಿದ 'ಗಿಲ್ಲಿ' ನಟನಿಗೆ ಸಿಕ್ತು 'ಕಿಚ್ಚನ ಚಪ್ಪಾಳೆ'; ಮನೆಯೊಳಗೆ ಬಂತು ಸ್ವೀಟ್ ಸರ್ಪ್ರೈಸ್!

ಪ್ರಿಯಾಂಕ್ ತವರಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಸಿಗಲಿಲ್ಲ ಅನುಮತಿ, ಚಿತ್ತಾಪುರದಲ್ಲಿ ಭೀಮ್ ಆರ್ಮಿಯ ಕಾರ್ಯಕ್ರಮಕ್ಕೆ ಅವಕಾಶ!

ನಿಮ್ಮಲ್ಲಿ ಆಡೊಲ್ಲ ಎಂದ ಅಫ್ಘಾನಿಸ್ತಾನ; ಖಾಲಿ ಕುಳಿತಿದ್ದ ತಂಡವನ್ನು ತ್ರಿಕೋನ ಸರಣಿಗೆ ಫಿಕ್ಸ್ ಮಾಡುವಲ್ಲಿ ಪಾಕ್ ಸಕ್ಸಸ್

ಪಟಾಕಿಯ ವಿಚಾರ ನಮಗೆಲ್ಲಾ ಗೊತ್ತೇ ಇದೆ. ಪಟಾಕಿಯಲ್ಲಿ ತುಂಬಿಸಿರುವ ರಾಸಾಯನಿಕ ಮದ್ದಿನಿಂದಾಗಿ ಅವುಗಳಿಂದ ಹೊರ ಹೊಮ್ಮುವ ಹೊಗೆ ಪರಿಸರಕ್ಕೆ ಹಾನಿಯುಂಟುಮಾಡುವುದಲ್ಲದೆ,

ಸಿಡಿಯುವಾಗ ಇದರಿಂದ ಬರುವ ದೊಡ್ಡ ಶಬ್ದವು, ತಾತ್ಕಾಲಿಕ ಶ್ರವಣ ದೋಷ ಅಂದರೆ ಕಿವಿಗೆ ಸಂಬಂಧ ಪಟ್ಟ ಸಮಸ್ಯೆ ಮತ್ತು ಶಾಶ್ವತ ಕಿವುಡುತನದಂತಹ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತದೆ ಎನ್ನುತ್ತಾರೆ ಆರೋಗ್ಯ ತಜ್ಞರು.

ಹೀಗಾಗಿ ಇವೆಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಮಾರು ಕಟ್ಟೆಯಲ್ಲಿ ಈ ಹೊಸ ಹೊಸ ಹೆಸರು ಕೇಳಿಬರುತ್ತಿದೆ ಅದೇ ಗ್ರೀನ್ ಕ್ರ್ಯಾಕರ್ಸ್ ಅಂದರೆ ಹಸಿರು ಪಟಾಕಿ.

**ಹಾಗಾದ್ರೆ ಏನಿದು ಹಸಿರು ಪಟಾಕಿಗಳು ಎಂದರೇನು?**

ಹಸಿರು ಪಟಾಕಿಗಳು ಸಾಂಪ್ರದಾಯಿಕ ಪಟಾಕಿಗಳಿಗಿಂತ ಕಡಿಮೆ ಮಾಲಿನ್ಯವನ್ನು ಉಂಟುಮಾಡುವ ಪಟಾಕಿಗಳಾಗಿವೆ. ಅವುಗಳನ್ನು ಅಖಐಖ–ಓಇಇಖಐ 2018 ರಲ್ಲಿ ಅಭಿವೃದ್ಧಿಪಡಿಸಿತು.

ಈ ಪಟಾಕಿಗಳು ಗಮನಾರ್ಹವಾಗಿ ಕಡಿಮೆ ಹಾನಿಕಾರಕ ರಾಸಾಯನಿಕ ಗಳನ್ನು ಹೊಂದಿರುತ್ತವೆ ಅಥವಾ ಸುಟ್ಟಾಗ ಕಡಿಮೆ ಹೊಗೆ ಮತ್ತು ಶಬ್ದವನ್ನು ಉತ್ಪಾದಿಸುವ ವಸ್ತುಗಳಿಂದ ಬದಲಾಯಿಸಲಾಗುತ್ತದೆ.

ಅವು ಬೇರಿಯಂ ನೈಟ್ರೇಟ್, ಸಲ್ಫರ್ ಮತ್ತು ಪೊಟ್ಯಾಸಿಯಮ್ ನೈಟ್ರೇಟ್‌ನಂತಹ ಹಾನಿಕಾರಕ ರಾಸಾಯನಿಕಗಳನ್ನು ಹೊಂದಿರುವುದಿಲ್ಲ ಅಥವಾ ಬಹಳ ಕಡಿಮೆ ಹೊಂದಿರುತ್ತವೆ.

ಅವುಗಳನ್ನು ಜಿಯೋಲೈಟ್ ಮತ್ತು ಐರನ್ ಆಕ್ಸೈಡ್‌ನಂತಹ ರಾಸಾಯನಿಕಗಳಿಂದ ಬದಲಾಯಿಸಲಾಗುತ್ತದೆ, ಇದು ಗಾಳಿಯಲ್ಲಿ ಹಾನಿಕಾರಕ ಅಂಶಗಳನ್ನು ಕಡಿಮೆ ಮಾಡುತ್ತದೆ.

ಈ ಪಟಾಕಿಗಳು ಉರಿಯುವಾಗ, ಅವು ನೀರಿನ ಆವಿ ಅಥವಾ ಗಾಳಿ ಯಂತಹ ಅನಿಲಗಳನ್ನು ಬಿಡುಗಡೆ ಮಾಡುತ್ತವೆ, ಇದು ವಾಯುಗಾಮಿ ಧೂಳನ್ನು ಕಡಿಮೆ ಮಾಡುತ್ತದೆ.

ಅವು ಹೊರಸೂಸುವ ಶಬ್ದವು ಸೀಮಿತವಾಗಿದೆ, ಸರಿಸುಮಾರು 110 ರಿಂದ 125 ಡೆಸಿಬಲ್‌ಗಳು, ಆದರೆ ಸಾಂಪ್ರದಾಯಿಕ ಪಟಾಕಿಗಳು 160 ಡೆಸಿಬಲ್‌ಗಳವರೆಗೆ ಶಬ್ದವನ್ನು ಉತ್ಪಾದಿಸಬಹುದು.

ಹಸಿರು ಪಟಾಕಿಗಳು ಮತ್ತು ಸಾಮಾನ್ಯ ಪಟಾಕಿಗಳ ನಡುವಿನ ವ್ಯತ್ಯಾಸ

ಸಾಮಾನ್ಯ ಪಟಾಕಿಗಳು ಭಾರ ಲೋಹಗಳ ಸಂಯುಕ್ತಗಳನ್ನು (ಸೀಸ, ಅಲ್ಯೂಮಿನಿಯಂ, ಬೇರಿಯಂ ಇತ್ಯಾದಿ) ಹೊಂದಿರುತ್ತವೆ, ಇವುಗಳನ್ನು ಸುಟ್ಟಾಗ ಗಾಳಿ ಮತ್ತು ಆರೋಗ್ಯ ಎರಡಕ್ಕೂ ಅತ್ಯಂತ ಹಾನಿಕಾರಕ.

ಅದೇ ಸಮಯದಲ್ಲಿ, ಜಿಯೋಲೈಟ್ ಮತ್ತು ಕಬ್ಬಿಣದ ಆಕ್ಸೈಡ್‌ನಂತಹ ಬಹುಕ್ರಿಯಾತ್ಮಕ ವಸ್ತುಗಳನ್ನು ಹಸಿರು ಪಟಾಕಿಗಳಿಗೆ ಸೇರಿಸಲಾಗುತ್ತದೆ, ಇದು ರಾಸಾಯನಿಕ ಅಂಶವನ್ನು ಕಡಿಮೆ ಮಾಡುವ ಮೂಲಕ ಹೊರ ಸೂಸುವಿಕೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಅಂದರೆ, ಸಾಮಾನ್ಯ ಪಟಾಕಿಗಳಿಗೆ ಹೋಲಿಸಿದರೆ, ಹಸಿರು ಪಟಾಕಿಗಳು ಕಡಿಮೆ ಮಾಲಿನ್ಯವನ್ನು ಹರಡುತ್ತವೆ ಮತ್ತು ಆರೋಗ್ಯಕ್ಕೆ ಸುರಕ್ಷಿತ ಆಯ್ಕೆಯೆಂದು ಪರಿಗಣಿಸಲಾಗುತ್ತದೆ.?

ಹಸಿರು ಪಟಾಕಿಗಳು ಸಂಪೂರ್ಣವಾಗಿ ಮಾಲಿನ್ಯ ಮುಕ್ತವೇ?

ಹಸಿರು ಪಟಾಕಿಗಳು ಸಂಪೂರ್ಣವಾಗಿ ಮಾಲಿನ್ಯ ಮುಕ್ತವೇ?

ಇಲ್ಲ, ಹಸಿರು ಪಟಾಕಿಗಳು ಸಂಪೂರ್ಣವಾಗಿ ಮಾಲಿನ್ಯ ಮುಕ್ತವಲ್ಲ, ಆದರೆ ಅಖಐಖ–ಓಇಇಖಐ ಪ್ರಕಾರ, ಅವು ಸಾಮಾನ್ಯ ಪಟಾಕಿಗಳಿಗಿಂತ ಸುಮಾರು 30 ಪ್ರತಿಶತ ಕಡಿಮೆ ವಾಯು ಮಾಲಿನ್ಯವನ್ನು ಉಂಟುಮಾಡುತ್ತವೆ.

ಈ ಮಾಲಿನ್ಯವು ಮುಖ್ಯವಾಗಿ ಕಣಗಳ ವಸ್ತು (PM) ದಿಂದ ಉಂಟಾಗುತ್ತದೆ.

ಇವು ಗಾಳಿಯಲ್ಲಿ ತೇಲುತ್ತಿರುವ ಸಣ್ಣ ಧೂಳಿನ ಕಣಗಳಾಗಿವೆ.

ಅವುಗಳ ಗಾತ್ರವನ್ನು ಆಧರಿಸಿ ಅವುಗಳನ್ನು ನಾಲ್ಕು ವರ್ಗಗಳಾಗಿ ವರ್ಗೀಕರಿಸಲಾಗಿದೆ: ಕಒ10, ಕಒ2.5, ಕಒ1, ಮತ್ತು ಅಲ್ಟ್ರಾ–ಸೂಕ್ಷ್ಮ ಕಣಗಳ ವಸ್ತು.

ಕಣಗಳು ಚಿಕ್ಕದಾದಷ್ಟೂ, ಅವು ದೇಹವನ್ನು ಆಳವಾಗಿ ಭೇದಿಸಬಹುದು, ಉಸಿರಾಟದ ಸಮಸ್ಯೆಗಳನ್ನು ಹೆಚ್ಚಿಸುತ್ತವೆ.

ಹಸಿರು ಪಟಾಕಿಗಳು ಸಂಪೂರ್ಣವಾಗಿ ಮಾಲಿನ್ಯ ಮುಕ್ತವಲ್ಲ; ಅವು ಸಾಂಪ್ರದಾಯಿಕ ಪಟಾಕಿಗಳಿಗಿಂತ ಶೇಕಡಾ 30 ರಿಂದ 40 ರಷ್ಟು ಕಡಿಮೆ ಮಾಲಿನ್ಯವನ್ನು ಮಾತ್ರ ಉತ್ಪಾದಿಸುತ್ತವೆ.





ಸಮಸ್ತ ನಾಡಿನ ಜನತೆಗೆ

## ದೀಪಾವಳಿಯ ಹಬ್ಬದ ಶುಭಾಶಯಗಳು

**ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿಯಮಿತ, ಬಾಗಲಕೋಟೆ**

ಪ್ರಧಾನ ಕಛೇರಿ ಸೆಕ್ಟರ ನಂ: 24 ನವನಗರ, ಬಾಗಲಕೋಟೆ-587103. ದೂರವಾಣಿ: 08354-236443, 235573, 235532.
ರ.ನಂ: ಆರ್.ಸಿ.ಎಸ್/ ಸಿ.ಆರ್.ಡಿ/ 32208/2001-02 ದಿ:01-02-2003.
E-mail: ho@bagalkotdccbank.com <mailto:ho@bagalkotdccbank.com
ಪಕ್ಷಿನೋಟ

(ರೂ: ಕೋಟಿಗಳಲ್ಲಿ)

| ಮಾರ್ಚ–2025 ಕ್ಕೆ ಇದ್ದಂತೆ | |
|---|---|
| ವಿವರಗಳು | ಮೊತ್ತ |
| ಸಂದಾಯವಾದ ಶೇರು | 221.48 |
| ನಿಧಿಗಳು | 390.80 |
| ಠೇವಣಿಗಳು | 3857.04 |
| ಪಡೆದ ಸಾಲಗಳು | 1178.82 |
| ದುಡಿಯುವ ಬಂಡವಾಳ | 5705.26 |
| ಬರತಕ್ಕ ಸಾಲ ಬಾಕಿ | 3630.52 |
| ಒಟ್ಟು ಹೂಡಿಕೆಗಳು | 1376.26 |
| ನಿವ್ವಳ ಲಾಭ | 7.61 |

ಬ್ಯಾಂಕಿನ ಠೇವಣಿಗಳ ಮೇಲಿನ ಬಡ್ಡಿದರಗಳು (ದಿನಾಂಕ 13–09–2024 ರಿಂದ) (ಪ್ರತಿಶತ)

| ಠೇವಣಿ ಅವಧಿ ವಿವರ | ಬಡ್ಡಿದರ | ಅರ್ಬನ್ ಬ್ಯಾಂಕ/ ಸಂಘ ಸಂಸ್ಥೆಗಳಿಗೆ |
|---|---|---|
| ಉಳಿತಾಯ ಖಾತೆ | 3.00% | 3.00% |
| ಮುದ್ದತ ಠೇವಣಿ | | |
| 15 ರಿಂದ 45 ದಿನಗಳವರೆಗೆ | 5.00% | 5.25% |
| 46 ರಿಂದ 90 ದಿನಗಳವರೆಗೆ | 5.25% | 5.50% |
| 91 ರಿಂದ 180 ದಿನಗಳವರೆಗೆ | 6.25% | 6.50% |
| 181 ರಿಂದ 364 ದಿನಗಳವರೆಗೆ | 6.50% | 6.75% |
| 1 ವರ್ಷ ಮತ್ತು ಮೇಲ್ಪಟ್ಟು | 7.50% | 7.50% |

ವಿಶೇಷ ಠೇವುಗಳು.

| ಅನು | ಠೇವುಗಳ ವಿವರ | ಅವಧಿ | ಪರಿಷ್ಕರಿಸಿ ನಿಗದಿಪಡಿಸಿದ ಬಡ್ಡಿ ದರ |
|---|---|---|---|
| | ರೂ: 25.00 ಲಕ್ಷದಿಂದ 1.00 ಕೋಟಿ ಒಳಗೆ | 1 ವರ್ಷ | 7.75% |
| | ರೂ: 1.00 ಕೋಟಿಯಿಂದ 10.00 ಕೋಟಿ ಒಳಗೆ | 1 ವರ್ಷ | 8.00% |
| | ರೂ: 10.00 ಕೋಟಿಯಿಂದ ರೂ: 20.00 ಕೋಟಿ ಒಳಗೆ | 1 ವರ್ಷ | 8.25% |
| | ರೂ: 20.00 ಕೋಟಿ ಮೇಲ್ಪಟ್ಟು | 1 ವರ್ಷ | 8.50% |

ಸೂಚನೆ:- 1) 1 ರಿಂದ 4 ರಲ್ಲಿ ವಿಶೇಷ ಠೇವು ಸೌಲಭ್ಯ 1 ವರ್ಷ ಹಾಗೂ ಮೇಲ್ಪಟ್ಟು ಮುದ್ದತ ಠೇವುಗಳು ಇರಿಸಿದಲ್ಲಿ (Fixed Deposit) ಮಾತ್ರ ವಿಶೇಷ ಠೇವು ಅನ್ವಯಿಸುತ್ತದೆ ಹಾಗೂ ವಿಜಯಲಕ್ಷ್ಮೀ ಠೇವುಗಳಿಗೆ (VLD) ಇದು ಅನ್ವಯಿಸುವುದಿಲ್ಲ.
2) ವಿಶೇಷ ಠೇವು ಸೌಲಭ್ಯ ಅರ್ಬನ ಬ್ಯಾಂಕ ಮತ್ತು ಇತರೇ ಎಲ್ಲಾ ಸಹಕಾರಿ ಸಂಘಗಳಿಗೆ ಅನ್ವಯಿಸುತ್ತದೆ. ಹಾಗೂ 1.00 ಕೋಟಿ ಮೇಲ್ಪಟ್ಟು ಠೇವುಗಳಿಗೆ ಅವಧಿ ಪೂರ್ವ (Before Maturity) ಪಾವತಿಗೆ ಅನ್ವಯಿಸುವುದಿಲ್ಲ.
3) ಹಿರಿಯ ನಾಗರಿಕರಿಗೆ ಹಾಗೂ ಬ್ಯಾಂಕ ಸಿಬ್ಬಂದಿಗಳಿಗೆ ಪ್ರತಿಶತ 0.50% ಹೆಚ್ಚಿಗೆ ಬಡ್ಡಿದರ ಕೊಡಲಾಗುವುದು.
4) ನಿವೃತ್ತ ಬ್ಯಾಂಕ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಪ್ರತಿಶತ 0.50% ರಷ್ಟು ಹೆಚ್ಚಿಗೆ ಬಡ್ಡಿ ನೀಡುವುದು. (ಆರ್.ಬಿ.ಆಯ್./ನಬಾರ್ಡ ನಿರ್ದೇಶನದಂತೆ ಆದಾಯದ ಮೂಲದ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯುವುದು)
5) ಬ್ಯಾಂಕಿನಲ್ಲಿ ಕಾಂಟ್ಸಟ್ಟ ನಿಧಿ (RFD) ಠೇವಣಿಗೆ ಪ್ರತಿಶತ 7.50% ರಷ್ಟು ಬಡ್ಡಿ ನೀಡಲಾಗುವುದು.

| | | | |
|---|---|---|---|
| ಶ್ರೀ ಅಜಯಕುಮಾರ ಎಸ್. ಸರನಾಯಕ | ಅಧ್ಯಕ್ಷರು | ಶ್ರೀ ಪಿ. ಆಯ್. ಶಹಾಪೆಟ್ಟಿ | ನಿರ್ದೇಶಕರು |
| ಶ್ರೀ ಮುರಗೇಶ ಆಯ್. ಕಡ್ಲಿಮಟ್ಟಿ | ಉಪಾಧ್ಯಕ್ಷರು | ಶ್ರೀ ಕೆ.ಬಿ. ಜನಾಲಿ | ನಿರ್ದೇಶಕರು |
| ಶ್ರೀ ಎಸ್. ಕೆ. ಸವದಿ | ನಿರ್ದೇಶಕರು | ಶ್ರೀ ಎಸ್. ಎಸ್. ಅಗಸಿಮುಂದಿನ | ನಿರ್ದೇಶಕರು |
| ಶ್ರೀ ಎಚ್. ವಾಯ್. ಮೇಟಿ | ನಿರ್ದೇಶಕರು | ಶ್ರೀ ಎ. ಕೆ. ಸವದಿ | ನಿರ್ದೇಶಕರು |
| ಶ್ರೀ ವ್ಹಿ. ಎಸ್. ಕಾಶಪ್ಪನವರ | ನಿರ್ದೇಶಕರು | ಶ್ರೀ ದಾನಯ್ಯ ಹಿರೇಮಠ ಕೆ.ಸಿ.ಎಸ್ ಉಪ ನಿಬಂಧಕರು ಸಹಕಾರಿ ಸಂಘಗಳು ಬಾಗಲಕೋಟೆ. | ನಿರ್ದೇಶಕರು |
| ಶ್ರೀ ಎಚ್. ಆರ್. ನಿರಾಣಿ | ನಿರ್ದೇಶಕರು | ಶ್ರೀ ಬಿ. ಎಂ. ಪಾಟೀಲ (ಅಪೆಕ್ಸ್ ಬ್ಯಾಂಕ ನಾಮನಿ) | ನಿರ್ದೇಶಕರು |
| ಶ್ರೀ ಎಸ್. ಆರ್. ಪಾಟೀಲ | ನಿರ್ದೇಶಕರು | ಶ್ರೀ ಪಿ. ಡಿ. ಚಿತ್ತಿ | ವೃತ್ತಿಪರ ನಿರ್ದೇಶಕರು |
| ಶ್ರೀ ಎ. ಎಸ್. ನ್ಯಾಮಗೌಡ | ನಿರ್ದೇಶಕರು | ಶ್ರೀ ಕೆ. ಎಸ್. ಜಿಗಜಿನ್ನಿ | ವೃತ್ತಿಪರ ನಿರ್ದೇಶಕರು |
| ಶ್ರೀ ಆರ್. ಎಸ್. ತಳೇವಾಡ | ನಿರ್ದೇಶಕರು | ಶ್ರೀ ಸಿದ್ದನಗೌಡ ಎನ್. ನೀಲಪ್ಪನವರ ಕೆ.ಸಿ.ಎಸ್ ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿ |

ಈ ವರೆಗೆ ಜಿಲ್ಲೆಯಲ್ಲಿ 254191 ರೈತರಿಗೆ ರೂ: 1375.06 ಕೋಟಿ ಅಲ್ಪಾವಧಿ ಕೃಷಿ ಸಾಲ ಮತ್ತು 9165 ರೈತರಿಗೆ ಮಧ್ಯಮಾವಧಿ ಕೃಷಿ ಸಾಲ ರೂ: 205.42 ಕೋಟಿಗಳಷ್ಟು ಸಾಲ ವಿತರಿಸಲಾಗಿದೆ. ರಾಜ್ಯದಲ್ಲಿಯೇ ಅತೀ ಹೆಚ್ಚು ಕೃಷಿ ಸಾಲ ವಿತರಿಸಿದ ಏಕೈಕ ಬ್ಯಾಂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರಗಳನ್ನು ನೀಡಲಾಗುವದು.

**ಜಿಲ್ಲೆಯ ಸಹಕಾರಿ ವಲಯದ ವಿಶ್ವಾಸಾರ್ಹ ಬ್ಯಾಂಕ್**



ಶ್ರೀ ಸಿದ್ದನಗೌಡ ಎನ್. ನೀಲಪ್ಪನವರ ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಶ್ರೀ ಮುರಗೇಶ ಆಯ್. ಕಡ್ಲಿಮಟ್ಟಿ ಉಪಾಧ್ಯಕ್ಷರು. | ಶ್ರೀ ಅಜಯಕುಮಾರ ಸರನಾಯಕ ಅಧ್ಯಕ್ಷರು.




# ಮನೆ ಮನ ಬೆಳಗುವ ಬೆಳಕಿನ ಹಬ್ಬ ದೀಪಾವಳಿ

ದೀಪಾವಳಿ----'ದೀಪಾ' ಎಂದರೆ ಮಣ್ಣಿನ ದೀಪ, ಜ್ಯೋತಿ. ಹಾಗೂ 'ಆವಲಿ' ಎಂದರೆ ಯಾವುದಾದರು ವಸ್ತು ಸರಣಿಯಾಗಿಯಿಡುವುದು. ದೀಪಗಳ ಸಮೂಹ.ದೀಪಾವಳಿಯ ಅಮವಾಸ್ಯೆಯು ಸಾಲು ಸಾಲು ದೀಪಗಳ ಹಬ್ಬವಾಗಿದೆ. ದೀಪಾವಳಿ ಹಬ್ಬವನ್ನು ಹಿಂದೂಗಳ ಹಬ್ಬ ಮಾತ್ರ ಆಗಿರದೇ ಈ ಹಬ್ಬವನ್ನು ಜೈನ್, ಸಿ???ಗಳು ಹಾಗೂ ಬೌದ್ಧರು ಕೂಡ ಈ ಹಬ್ಬವನ್ನು ಆಚರಿಸುತ್ತಾರೆ.

ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ದೀಪಾವಳಿಗೆ ಅದರದ್ದೇ ಆದ ಮಹತ್ವವಿದೆ ಹಾಗೂ ಅವರದ್ದೆ ಆದ ಕೆಲವು ಸಂಪ್ರದಾಯಗಳು ಇರುತ್ತವೆ. ಕೆಲವರು ತಮ್ಮ ಸಂಪ್ರದಾಯಕ್ಕೆ ತಕ್ಕಂತೆ ತಮ್ಮ ಹಬ್ಬವನ್ನು ಆಚರಿಸುತ್ತಾರೆ. ಆದರೆ ಎಲ್ಲರ ಪ್ರಕಾರ ದೀಪಾವಳಿ ಹಬ್ಬ ರಾಮಾಯಣದ ಕಥೆಗೆ ಹೊಂದಿಕೊಂಡಿದೆ.

ರಾವಣನನ್ನು ಸಂಹಾರ ಮಾಡಿ ರಾಮ, ಸೀತಾ, ಲಕ್ಷ್ಮಣ ಹಾಗೂ ಹನುಮಂತ ಲಂಕೆಯಿಂದ ಆಯೋಧ್ಯೆಗೆ ಹಿಂದಿರುಗಿದ ದಿನ. ಅಲ್ಲದೇ ರಾಮ ಪಟ್ಟಾಭಿಷೇಕಗೊಂಡ ದಿನ. ಹಾಗಾಗಿ ಜನರು ಆ ದಿನ ಆನಂದದಿಂದ ದೀಪಗಳನ್ನು ಬೆಳಗಿಸಿ ರಾಮನನ್ನು ಸ್ವಾಗತಿಸಿದ್ದರು. ಅಲ್ಲದೇ ಪಾಂಡವರು ಕೂಡ ಅದೇ ದಿನ ತಮ್ಮ ಅಜ್ಞಾತವಾಸವನ್ನು ಮುಗಿಸಿದ ದಿನ ಎನ್ನುವ ಪ್ರತೀತಿ ಇದ.

ದೀಪಾವಳಿಯ ಐದು ಹಬ್ಬಗಳು ಹಾಗೂ ಅದರ ಮಹತ್ವಗಳು;

1. ದನ್ತೇರಸ್:. ಈ ದಿನ ಜನರು ತಮ್ಮ ಮನೆಗೆ ಅಡುಗೆ ಪಾತ್ರೆಗಳು, ಚಿನ್ನದ ನಾಣ್ಯ ಹಾಗೂ ಆಭರಣಗಳನ್ನು ಖರೀದಿಸಲು ಹೋಗುತ್ತಾರೆ. ಅಲ್ಲದೇ ತಮ್ಮ ಮನೆ ಹಾಗೂ ಕಚೇರಿಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಮಣ್ಣಿನ ದೀಪವನ್ನು ಹಚ್ಚಿ ಅಲಂಕರಿಸುತ್ತಾರೆ.

2. ನರಕ ಚತುರ್ದಶಿ: ನರಕ ಚತುರ್ದಶಿಯನ್ನು ಚೋಟಾ ದೀಪಾವಳಿ ಎಂದು ಕರೆಯುತ್ತಾರೆ. . ಶ್ರೀಕೃಷ್ಣನು ನರಕಾಸುರನನ್ನು ಕೊಂದ ನೆನಪನ್ನು ಈ ಹಬ್ಬ ತರುತ್ತದೆ. ನರಕಾಸುರನನ್ನು ಆಶ್ವಯುಜ ಕೃಷ್ಣ ಚತುರ್ದಶಿಯ ಕತ್ತಲೆಯಲ್ಲಿ ಕೃಷ್ಣ ಸಂಹಾರ ಮಾಡುತ್ತಾನೆ. ಈ ಹಬ್ಬದಂದು ಸಿಹಿ ತಿನುಸುಗಳನ್ನು ಖರೀದಿಸಿ ಕುಟುಂಬದವರಿಗೆ, ಸ್ನೇಹಿತರಿಗೆ ಹಾಗೂ ಸಂಬಂಧಿಕರಿಗೆ ಹಂಚುತ್ತಾರೆ. ಸಿಹಿ ತಯಾರಿಸುವವರು ನರಕ ಚತುರ್ದಶಿದಂದು ಹೆಚ್ಚು ಸಮಯ ಕೆಲಸ ಮಾಡುತ್ತಾರೆ.

3. ದೀಪಾವಳಿ: ದೀಪಾವಳಿಯಂದು ಲಕ್ಷ್ಮಿ ಪೂಜೆ ಮಾಡುತ್ತಾರೆ. ಲಕ್ಷ್ಮೀ ಎಂದರೆ ಕೇವಲ ಧನಾಧಿದೇವತೆ ಎಂಬ ಪ್ರತೀತಿಯಿದೆ. ಲಕ್ಷ್ಮೀ ಕೇವಲ ಧನಲಕ್ಷ್ಮೀ ಮಾತ್ರವಲ್ಲ. ಸಕಲ ಶ್ರೇಯಸ್ಸುಗಳಿಗೆ ಲಕ್ಷ್ಮೀ ಕಾರಣ ಎಂದು ಹೇಳುತ್ತಾರೆ. ಈ ಹಬ್ಬದಂದು ಎಲ್ಲರೂ ತಮ್ಮ ಕುಟುಂಬದವರೊಂದಿಗೆ ಸೇರಿ ಒಬ್ಬರಿಗೊಬ್ಬರು ಸಿಹಿ ಹಂಚಿ ಉಡುಗೊರೆ ನೀಡುತ್ತಾರೆ.

4.ಗೋಪೂಜೆ: ದೀಪಾವಳಿಯ ನಾಲ್ಕನೇ ದಿನ ಗೋ ಪೂಜೆ ಮಾಡುತ್ತಾರೆ. ಈ ದಿನದಂದು ಗೋವುಗಳನ್ನು ಅಲಂಕರಿಸಿ, ಹಾಲು ಹಿಡಿಯುವ ಪಾತ್ರೆ, ಕುಡಗೋಲುಗಳನ್ನು ಪೂಜಿಸಿ, ಗೋಶಾಲೆಯನ್ನು ದೀಪದಿಂದ ಬೆಳಗಿ, ಹಸುಗಳಿಗೆ ಅಕ್ಕಿ, ಬೆಲ್ಲ, ತಿಂಡಿ ತಿನಿಸುಗಳನ್ನು ನೀಡುತ್ತಾರೆ. ಉತ್ತರ ಭಾರತದಲ್ಲಿ ಅಥವಾ ಕೆಲವರ ಸಂಪ್ರದಾಯದಲ್ಲಿ ಈ ದಿನದಂದು ಪತಿ ತಮ್ಮ ಪತ್ನಿಯರಿಗೆ ಉಡುಗೊರೆ ನೀಡುತ್ತಾರೆ. ಅಲ್ಲದೇ ಹೊಸದಾಗಿ ಮದುವೆಯಾದ ಜೋಡಿಯನ್ನು ಮನೆಗೆ ಔತಣಕ್ಕೆ ಕರೆದು ಉಡುಗೊರೆ ನೀಡಲಾಗುತ್ತದೆ.

5. ಬಾಯ್ ದೂಜ್: ಬಾಯ್ ದೂಜ್ ಅನ್ನು ಬಯ್ಯಾ ದೂಜ್ ಎಂದು ಕ-ರೆಯುತ್ತಾರೆ. ದೀಪಾವಳಿಯ ಐದನೇ ದಿನದಂದು ಈ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬ ಅಣ್ಣ-ತಂಗಿಯರ ಹಬ್ಬವಾಗಿದ್ದು, ಅಣ್ಣಂದಿರು ತಮ್ಮ ತಂಗಿಯ ಮನೆಗೆ ಊಟಕ್ಕೆ ಹೋಗುತ್ತಾರೆ. ಅಲ್ಲದೇ ತಿಲಕ ಶಾಸ್ತ್ರ ಮಾಡುತ್ತಾರೆ. ಸಹೋದರಿಯರು ತಮ್ಮ ಸಹೋದರನಿಗೆ ತಿಲಕ ಶಾಸ್ತ್ರ ಮಾಡುತ್ತಾರೆ. ಇದನ್ನು ಮತ್ತೊಂದು ರಕ್ಷಾ ಬಂಧನ ಎಂದೂ ಕರೆಯಲಾಗುತ್ತದೆ.

ನಾಡಿನಾದ್ಯಂತ ಜನರು ಸಂಭ್ರಮ-ಸಡಗರದಿಂದ ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ. ಉತ್ತರ ಕರ್ನಾಟಕದ ರೈತರು ಮನೆಮನೆಗಳಲ್ಲಿ ಪಶು ಸಂಪತ್ತು ವೃದ್ಧಿಗಾಗಿ ದೀಪಾವಳಿ ಸಂದರ್ಭದಲ್ಲಿ ಸಾಕುಪ್ರಾಣಿಗಳ ಮುಂತಾದ ಪ್ರಾಣಿಗಳಿಗೆ ವಿಶೇಷ ಪೂಜೆ ಸಲ್ಲಿಸಿ ನಮಸ್ಕರಿಸುತ್ತಾರೆ. ಹಬ್ಬದ ಆಚರಣೆಯು ವಿಶಿಷ್ಟವಾಗಿದೆ ಈ ಸಂದರ್ಭದಲ್ಲಿ ವ್ಯಾಪಾರಸ್ಥರು ಹಾಗೂ ಜನಸಾಮಾನ್ಯರು ಅದ್ದೂರಿಯಾಗಿ ಲಕ್ಷ್ಮಿ ಪೂಜೆಯನ್ನು ನೆರವೇರಿಸುತ್ತಾರೆ. ಅದೇ ರೀತಿ ಮನೆಗಳಲ್ಲಿ ನಡೆಯುವ ಲಕ್ಷ್ಮಿ ಪೂಜೆಯು ಲಕ್ಷ್ಮಿ ವೃದ್ಧಿಯಾಗಲು ಹಟ್ಟಿಯಲ್ಲಿರುವ ದನಕರು ಕುರಿ, ಆಡು, ಎತ್ತು, ಎಮ್ಮೆಗಳಿಗೆ ಪೂಜೆ ನಡೆಯುತ್ತದೆ. ಹಬ್ಬದ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಸಮುದಾಯದಿಂದ ಸಮುದಾಯಕ್ಕೆ ಬೇರೆಬೇರೆಯಾಗಿವೆ ಗ್ರಾಮೀಣ ಪ್ರದೇಶದ ರೈತರ ಮನೆಗಳಲ್ಲಿ ಲಕ್ಷ್ಮಿ ಪೂಜೆಯ ಆಚರಣೆ ವಿಶಿಷ್ಟವಾಗಿದೆ ರೈತರ ಮನೆಗಳಲ್ಲಿ ದೀಪಾವಳಿ ಅಮಾವಾಸ್ಯೆ ದಿನ ರಾತ್ರಿ ಲಕ್ಷ್ಮಿಗೆ ವಿಶೇಷ ಪೂಜೆ ನೆರವೇರುತ್ತದೆ. ಅಂದು ಮನೆಯ ಲಕ್ಷ್ಮಿಗೆ ಹೊಸ ಸೀರೆ ಕರಿ ಮೇಲೆ ಬರುವಂತೆ ಮಾಡಿ ಬಂಗಾರದ ದಾಗೀನು ಗಳಿಂದ ಕೊರಳ ಸರ, ಮಾಲೆಗಳಿಂದ ಶೃಂಗರಿಸುತ್ತಾರೆ. ಅದಕೆ ಲಕ್ಷ್ಮಿ ಎಂದು ಭಾವಿಸಿ ವಿಭೂತಿ, ಕುಂಕುಮ ಹೂಗಳಿಂದ ಅಲಂಕರಿಸಿ ಸಜ್ಜಕದ ಹೋಳಿಗೆ ನೈವೇದ್ಯ ಮಾಡುತ್ತಾರೆ. ಕರ್ಪೂರದ ಆರತಿ ಎತ್ತಿ ತೆಂಗಿನಕಾಯಿ ಒಡೆದು ಭಕ್ತಿಪೂರ್ವಕವಾಗಿ ನವರು.

ಹಟ್ಟಿ ಪೂಜೆ****.

ದನಗಳು ಹಾಗೂ ಕುರಿಮಂದೆಯ ಹಟ್ಟಿಯಲ್ಲಿ ಲಕ್ಷ್ಮಿಗೆ ವಿಶೇಷವಾಗಿ ಪೂಜೆ ಸಲ್ಲಿಸುತ್ತಾರೆ ಹಟ್ಟಿಯ ಮಧ್ಯದಲ್ಲಿ ಬನ್ನಿ ಗಿಡಗಳನ್ನು ಕಡಿದು ತಂದು ನಿಲ್ಲಿಸುತ್ತಾರೆ ಬನ್ನಿಗಿಡದ ಕೆಳಗೆ ಅಮಾವಾಸ್ಯೆಯ ನೀರವತೆಯ ಮಂದಬೆಳಕಿನಲ್ಲಿ ಹಟ್ಟಿಯಲ್ಲಿ ಲಕ್ಷ್ಮಿ ಪೂಜೆ ಮಾಡುತ್ತಾರೆ ಬನ್ನಿಗಿಡದಲ್ಲಿ ಲಕ್ಷ್ಮಿ ನೆಲೆಸಿರುವ ಎಂಬ ನಂಬಿಕೆಯೇ ಬನ್ನಿಗಿಡ ಕಡಿದು ತಂದು ಪೂಜಿಸುವುದಕ್ಕೆ ಕಾರಣವಾಗಿರಬಹುದು ದೇವರಿಗೆ ನೈವೇದ್ಯ ಸಲ್ಲಿಸಿದ ಮೇಲೆ ದೇವರನ್ನು ಪ್ರಸಾದವೆಂದು ಕುಟುಂಬದ ಸದಸ್ಯರಿಗೆ ಮಾತ್ರ ಹಂಚಿ ಉಳಿದ ಪ್ರಸಾದವನ್ನು ನೆಟ್ಟ ಬನ್ನಿಗಿಡದ ಬುಡದಲ್ಲಿಯೇ ತಗ್ಗು ತೆಗೆದು ಮುಚ್ಚುತ್ತಾರೆ. ಹಟ್ಟಿಯಲ್ಲಿ ನಡೆಯುವ ಪೂಜೆಯಲ್ಲಿ ಕುಟುಂಬದ ಸದಸ್ಯರು ಮಾತ್ರ ಪಾಲ್ಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಬಣ್ಣಿ ಗಿಡವನ್ನು ವಿವಿಧ ಹೂಗಳಿಂದ ಅಲಂಕರಿಸುತ್ತಾರೆ. ಲಕ್ಷ್ಮಿ ಪೂಜೆಗಾಗಿ ಮನೆ-ಮಠಗಳನ್ನು ಸಿಂಗರಿಸುವುದರಿಂದ ಈ ಹಬ್ಬ ಧಾರ್ಮಿಕ ಹಾಗೂ ಸಾಮಾಜಿಕ 2 ದೃಷ್ಟಿಗಳಿಂದ ಮಹತ್ವಪೂರ್ಣವಾಗಿದೆ.

ಬಲಿ ಪಾಡ್ಯಮಿ******

ಮಾರನೇ ದಿನ ಬಲಿಪಾಡ್ಯಮಿ ಅಂದು ನಸುಕಿನಲ್ಲಿ ಎದ್ದು ಸ್ನಾನಾದಿಗಳನ್ನು ಮುಗಿಸಿ ಹಸು-ಕರು ಕುರಿ ಮೇಕೆಗಳನ್ನು ಕಿಚ್ಚು ಹಾಯಿಸುವುವ ತಯಾರಿ ನಡೆಸುವರು ದನಕರು, ಕುರಿ, ಮೇಕೆಗಳನ್ನು ಹಟ್ಟಿಯಲ್ಲಿ ತಯಾರಿಸಿದ ಕಿಚ್ಚ ಹಾಯಿಸುವ ಪದ್ಧತಿ ಇದೆ. ದಕ್ಷಿಣ ಕರ್ನಾಟಕದಲ್ಲಿ ಎತ್ತುಗಳಿಗೆ ಮಾತ್ರ ಸಂಕ್ರಾಂತಿ ಸಮಯದಲ್ಲಿ ಕಿಚ್ಚು ಹಾಯಿಸುತ್ತಾರೆ. ಬಯಲುನಾಡಿನಲ್ಲಿ ಮುಂಬರುವ ಚಳಿಯನ್ನು ಎದುರಿಸಲು ಒಳಗಿರುವ ಚಳಿಯನ್ನು ತಡೆಯುವ ಸಾಮರ್ಥ್ಯ ದನಕರುಗಳಿಗೂ ಬರಲೆಂದು ಹಟ್ಟಿಯ ಬಾಗಿಲು ಮುಂದೆ ಮೇವಿನ ದಂಟಿನ ಕಿಚ್ಚು ಮಾಡುವರು ಅದರಲ್ಲಿ ತುರುಬಿ ,ತುಂಬಿ, ಗಣಜಲಿ, ಹೆಬ್ಬೇವು ಮೊದಲಾದ ಧಾರ್ಮಿಕ ಹಾಗೂ ಔಷಧಿ ಮಹತ್ವ ಪಡೆದ ಸಸ್ಯಗಳ ಎಲೆಯನ್ನು ಹಾಗೂ ಲೋಬಾನ ಹಾಕುವರು. ಹಟ್ಟಿಯ ತುಂಬಾ ಸುವಾಸನೆಯುಕ್ತ ಹೊಗೆ ಆವರಿಸುತ್ತಿದ್ದಂತೆ ಹಟ್ಟಿಯಲ್ಲಿರುವ ದನಕರು ಕುರಿ ಮೇಕೆಗಳನ್ನು ಕಿಚ್ಚ ಹಾಯಿಸುವರು. ಪಾಂಡವರು ಮನೆಯನ್ನು ಸೇರುವ ಆ ದಿನದಲ್ಲಿ ಕಿಚ್ಚದ ಹೊಗೆಯು ದನಕರು, ಕುರಿಮರಿಗಳಿಗೆ ತಾಗಿದರೆ ಚಳಿಯು ಹತ್ತುವದಿಲ್ಲವೆಂಬ ನಂಬಿಕೆ ಜನಪದರಲ್ಲಿ ಬೆಳೆದುಬಂದಿದೆ. ಇದರಲ್ಲಿ ಮನೆಮಂದಿಯೆಲ್ಲ ಪಾಲ್ಗೊಳ್ಳುವರು ಮನೆಯ ಹೆಣ್ಣುಮಗಳು ಹಟ್ಟಿಯ ಬಾಗಿಲಿನಲ್ಲಿ ಹಾಕಿದ ಕಿಚ್ಚು ಹಾಯ್ದು ಹೊರಬರುವ ಮೊದಲ ಹಸು, ಕರು ಕುರಿ ಮೇಕೆಗೆ ಆರತಿ ಬೆಳಗಿ ಕುಂಕುಮ ಹಚ್ಚುವಳು ಹೀಗೆ ಯಾವ ದನಕರು, ಕುರಿ, ಮೇಕೆಗೆ ಕುಂಕುಮ ಹಚ್ಚಲಾಗುವುದೋ ಆ ಹೆಣ್ಣುಮಗಳೇ ಅವನ್ನು ಬಳುವಳಿಯಾಗಿ ಪಡೆಯುವ ಸಂಪ್ರದಾಯ ಇದೆ.

ಪಾಂಡವರ ಪೂಜೆ*****

ಪಾಡ್ಯಮಿಯ ದಿನ ಬೆಳಿಗ್ಗೆ ದನಕರುಗಳಿಗೆ ಕಿಚ್ಚು ಹಾಯಿಸುವ ಕಾರ್ಯಕ್ರಮ ಮುಗಿದ ನಂತರ ಮನೆಯ ಗ್ರಹಿಣಿಯರು ಆಕಳ ಸಗಣಿಯಲ್ಲಿ ಪಾಂಡವರನ್ನು ತಯಾರಿಸುತ್ತಾರೆ. ಐದು ಮೂರ್ತಿಗಳನ್ನು ವೃತ್ತಾಕಾರದಲ್ಲಿ ಕೂಡ್ರಿಸಿ ಮಧ್ಯ ಭೂದೇವಿಯನ್ನು ಕೂಡಿಸುವರು ತಲೆಯ ಮೇಲೆ ಅವರಿ ಹೂ ಇಲ್ಲವೇ ಚಂಡು ಹೂ ಚುಚ್ಚುವರು. ಮತ್ತು ಉತ್ತರಾಣಿ ಕಡ್ಡಿಯನ್ನು ಚುಚ್ಚುವರು. ವೃತ್ತಾಕಾರದಲ್ಲಿ ಹಂಗ ನೂಲನ್ನು ಸುತ್ತು ಹಾಕಿ ಅರಿಶಿನ-ಕುಂಕುಮ ಬೊಟ್ಟು ಇಡುವರು. ಮನೆಯ ಜಗಲಿಯಲ್ಲಿ ಕೂಡ್ರಿಸಿದ ಪಾಂಡವರಿಗೆ ಶಾವಿಗೆ ಬೆಲ್ಲ ಹಾಲು ನೈವೇದ್ಯ ಹಿಡಿಯುವರು. ಪಾಂಡವರು ದಕ್ಷಿಣದಿಂದ ಉತ್ತರ ದಿಕ್ಕಿಗೆ ತೆರಳಿದ ನೆನಪಿಗಾಗಿ ರೈತರಲ್ಲಿ ಪಾಂಡವರ ಪೂಜೆ ಬೆಳೆದು ಬಂದಿದೆ ಎಂದು ನಂಬಲಾಗಿದೆ.

ಅಣೀ ಪೀಣಿ ಸಂಪ್ರದಾಯ*****

ಉತ್ತರ ಕರ್ನಾಟಕದಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ದನಕರುಗಳಿಗೆ ಬರುವ ಪೀಡೆ ದೂರಾಗಲಿ ಎಂದು ಆಶಿಸಿ ದೀಪ ಬೆಳಗುವುದು ಅಣೀ ಪೀಣಿ ಸಂಪ್ರದಾಯವಾಗಿದೆ. ಈ ಸಂದರ್ಭದಲ್ಲಿ ಹೇಳುವ ಅಣೀ ಪೀಣಿ ಹಾಡುಗಳು ಪಶು ಸಂಪತ್ತು ಹೆಚ್ಚಲಿ ಆರೋಗ್ಯದಿಂದ ಬಾಳಲಿ ಎಂಬ ಸಂದೇಶ ಹೊಂದಿದೆ. ಈ ಸಂಪ್ರದಾಯ ಆಚರಣೆ ಮಲೆನಾಡಿನ ಅಂಟಿಕೆ-ಪಂಟಿಕೆ ಸಂಪ್ರದಾಯದಂತೆ ಭಿನ್ನವಾಗಿದೆ ದನ ಕಾಯುವ ಅಥವಾ ಕುರಿ ಕಾಯುವ ಹುಡುಗರು ಈ ಸಂದರ್ಭದಲ್ಲಿ ಹಳ್ಳದ ದಂಡೆಯಲ್ಲಿ ಬೆಳೆದ ಜೇಕು ಅಥವಾ ಆಪು ಗಳಿಂದ ಅತ್ಯಂತ ಸುಂದರವಾಗಿ 5 ಹೆಡೆ ನಾಗರ ಆಕಾರದಲ್ಲಿ ಹೆಣೆದು ಮಾಡಿದ ಗೂಡಿನಲ್ಲಿ ದೀಪವನ್ನು ಇಟ್ಟುಕೊಂಡು ಮನೆಮನೆಗೆ ಹೋಗಿ ಅಣೀ ಪೀಣೀ ಹಾಡುಗಳನ್ನು ಹೇಳಿ ದನಕರುಗಳಿಗೆ ದೀಪ ಬೆಳಗುವರು.ಹೀಗೆ ಅನೇಕ ಶಿಷ್ಟಾಚಾರ, ವಿಶಿಷ್ಟತೆಯ, ಸಂಭ್ರಮದ ಹಬ್ಬ ದೀಪಾವಳಿ.ಎಲ್ಲರಿಗೂ ಮಂಗಳ ಉಂಟು ಮಾಡಲಿ.ತಮಸೋಮ ಜ್ಯೋತಿರ್ಗಮಯ.ಸರ್ವೇ ಜನ ಸುಖಿನೋ ಭವಂತು...



ಜಯಶ್ರೀ.ಭ.ಭಂಡಾರಿ.
ಬಾದಾಮಿ.







# ಕತ್ತಲೆಯ ಮೇಲೆ ಬೆಳಕಿನ ವಿಜಯದ ಸಂಕೇತ, ದೀಪದಿಂದ ದೀಪ ಹಚ್ಚುವ ಹಬ್ಬ ದೀಪಾವಳಿ

ಕತ್ತಲೆಯ ಮೇಲೆ ಬೆಳಕಿನ ವಿಜಯದ ಸಂಕೇತ, ದೀಪ ದಿಂದ ದೀಪ ಹಚ್ಚುವ ಹಬ್ಬ ದೀಪಾವಳಿ

ಭಾರತದ ರಾಷ್ಟ್ರೀಯ ಧಾರ್ಮಿಕ ಹಬ್ಬಗಳಲ್ಲಿ ಪ್ರಮುಖವಾದ ಹಬ್ಬ ದೀಪಾವಳಿ, ಕತ್ತಲೆಯ ಮೇಲೆ ಬೆಳಕಿನ ವಿಜಯ, ದೀಪ ದಿಂದ ದೀಪ ಹಚ್ಚುವ ಹಬ್ಬ ದೀಪಾವಳಿ, ಇದರ ಅರ್ಥ ನೋಡುವುದಾದರೆ ದೀಪಾವಳಿ ಎಂದರೆ ಸಂಸ್ಕೃತ ಪದವಾದ "ದೀಪ" (ದೀಪ) ಮತ್ತು "ಅವಲಿ" (ಸಾಲು) ಪದಗಳಿಂದ ಬಂದ "ದೀಪಗಳ ಸಾಲು". ಈ ಹಬ್ಬದಲ್ಲಿ ಸಾಲಾಗಿ ದೀಪಗಳನ್ನು ಹಚ್ಚಿ ಸಂಭ್ರಮ ದಿಂದ ಆಚರಣೆ ಮಾಡುತ್ತಾರೆ. ಪೌರಾಣಿನಕವಾಗಿ ನೋಡುವುದಾದರೆ ರಾಮ ಮತ್ತು ರಾವಣ ಯುದ್ಧದಲ್ಲಿ ರಾಮ ವಿಜಯವಾಗಿ ಸೀತೆಯನ್ನು ಕರೆದುಕೊಂಡು ಬರುವ ಐತಿಹಾಸಿಕ ದಿನ, ಸಿಹಿ ತಿನ್ನುಸುವಗಳ ಸಮ್ಮಿಲನ, ಪರಿವಾರದವರು ಎಲ್ಲರೂ ಸೇರಿ ಹೊಸ ಉಡುಪ ಧರಿಸಿ, ಪಟಾಕಿ ಸಿಡಿಸಿ ಲಕ್ಷ್ಮಿ ದೇವಿ ಪೂಜೆ ಮಾಡುವ ವರ್ಷದ ದೊಡ್ಡ ಹಬ್ಬವಾಗಿ ಆಚರಣೆ ಮಾಡುವ ದೀಪಾವಳಿ ಹಬ್ಬದ ಬಗ್ಗೆ ಈ ಲೇಖನದಲ್ಲಿ ತಿಳಿಯೋಣ...

### * ದೀಪಾವಳಿ ಪದದ ಅರ್ಥ ಏನು:

*ದೀಪಾವಳಿ ಎಂದರೆ ಸಂಸ್ಕೃತ ಪದವಾದ "ದೀಪ" (ದೀಪ) ಮತ್ತು "ಅವಲಿ" (ಸಾಲು) ಪದಗಳಿಂದ ಬಂದ "ದೀಪಗಳ ಸಾಲು" ಎಂದು ಅರ್ಥ. ಇದು ಮುಖ್ಯವಾಗಿ ಕತ್ತಲೆಯ ಮೇಲೆ ಬೆಳಕಿನ ವಿಜಯವನ್ನು, ಮತ್ತು ಕೆಟ್ಟದ್ದರ ಮೇಲೆ ಒಳ್ಳೆಯದನ್ನು ಸಂಕೇತಿಸುವ ಒಂದು ಹಬ್ಬವಾಗಿದೆ. ಈ ಹಬ್ಬವು ಹಿಂದೂ, ಸಿಖ್ ಮತ್ತು ಜೈನ ಧರ್ಮಗಳಲ್ಲಿ ಪ್ರಮುಖವಾದುದು, ಮತ್ತು ಇದು ಸಂತೋಷ, ಸಮೃದ್ಧಿ ಮತ್ತು ಏಕತೆಯನ್ನು ಆಚರಿಸುವ ಸಮಯವಾಗಿದೆ.

### * ದೀಪಾವಳಿ ಹಬ್ಬದ ಐತಿಹಾಸಿಕ ಹಿನ್ನೆಲೆ:

ರಾಮಾಯಣ ಕಥೆ ಪ್ರಕಾರ ರಾಮನು ರಾವಣನನ್ನು ಸೋಲಿಸಿ ಸೀತೆ ಮತ್ತು ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದಾಗ, ನಗರದ ಜನರು ಆ ಸಂಭ್ರಮವನ್ನು ದೀಪಗಳನ್ನು ಬೆಳಗುವ ಮೂಲಕ ಸ್ವಾಗತಿಸಿದರು. ಪ್ರತಿ ಮನೆ ಮನೆ ಯಲ್ಲಿ ಸಾಲು ಸಾಲು ದೀಪ ಹಚ್ಚಿದರು ಇದರಿಂದ ದೀಪಾವಳಿಯನ್ನು 'ಬೆಳಕಿನ ಹಬ್ಬ' ಎಂದು ಆಚರಿಸಲು ಪ್ರಾರಂಭಿಸಲಾಯಿತು ಎಂದು ಹೇಳಗುತ್ತದೆ.ಶ್ರೀಕೃಷ್ಣನು ನರಕಾಸುರ ಎಂಬ ರಾಕ್ಷಸನನ್ನು ಸಂಹರಿಸಿ, ಅವನ ಆಕ್ರಮಣದಿಂದ ಮುಕ್ತಗೊಳಿಸಿದ ದಿನವನ್ನು ಅನೇಕರು ದೀಪಾವಳಿಯ ಅಂಗವಾಗಿ ನರಕ ಚತುರ್ದಶಿ ಎಂದು ಆಚರಿಸುತ್ತಾರೆ.

### * ಲಕ್ಷ್ಮಿ ದೇವಿಯ ಅವತಾರ:

ದೀಪಾವಳಿ ಅಮಾವಾಸ್ಯೆ ದಿನ ಲಕ್ಷ್ಮಿ ದೇವಿಯು ಸಾಗರ ಮಂಥನದಲ್ಲಿ ಕಾರ್ತಿಕ ಅಮಾವಾಸ್ಯೆಯಂದು ಅವತರಿಸಿದಳು. ಆದ್ದರಿಂದ, ಈ ದಿನವನ್ನು ಲಕ್ಷ್ಮಿ ದೇವಿಯನ್ನು ತಳಿರು ತೆ-ೂರಣ, ಕಬ್ಬು, ಬಾಳೆ ಎಲೆ ಇಂದ ಅಲಂಕಾರ ಮಾಡಿ ಪೂಜೆ ಮಾಡುವರು, ಸಂಪತ್ತು ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸುವ ಹಬ್ಬವಾಗಿ ಆಚರಿಸಲಾಗುತ್ತದೆ.

ಲಕ್ಷ್ಮಿ ದೇವಿ ಪೂಜೆ ಯಲ್ಲಿ ಪ್ರತಿ ವರ್ಷದ ಹೊಸದಾಗಿ ದುಡ್ಡು ಇಟ್ಟು, ಧನ ಸಂಪತ್ತಿಗಾಗಿ ವಿಶೇಷ ಪೂಜೆ ಮಾಡುವರು.

### * ದೀಪಾವಳಿ ಹಬ್ಬಕ್ಕೆ ಹೊಸ ಆರಂಭ:

ದೀಪಾವಳಿಯು ಹೊಸ ಜೀವನದ ಅಥವಾ ಹೊಸ ವ್ಯವಹಾರಗಳ ಪ್ರಾರಂಭವನ್ನು ಸೂಚಿಸುತ್ತದೆ. ದೀಪಾವಳಿಯ ನಂತರ ಬರುವ 'ಬಲಿಪಾಡ್ಯಮಿ'ಯು ಹೊಸ ಆರ್ಥಿಕ ವರ್ಷದ ಪ್ರಾರಂಭಸುವರು, ಯಾವುದೇ ಹೊಸ ವ್ಯವಹಾರ ಮಾಡಲು ವರ್ಷದ ಅತಿ ಪ್ರಮುಕ ದಿನವಾಗಿ ಕಾರ್ತಿಕ ಮಾಸ ಶುಕ್ಲ ಪಕ್ಷ ಬಲಿಪಾಡ್ಯ ದಿನದಂದು ಪ್ರಾರಂಭಿಸುವ ಶ್ರೇಷ್ಠ ಹಬ್ಬವಾಗಿದೆ.

### *ಹೊಸ ವಾಹನ ಮತ್ತು ಮನೆ ವಸ್ತು ಖರೀದಿ:

ಹೊಸ ವಾಹನಗಳು ಬೈಕ, ಕಾರು, ಜೀಬು, ಬಸ್ಸು, ಟ್ರ್ಯಾಕ್ಟರ್, ಹೀಗೆ ಅನೇಕ ಹೊಸ ವಾಹನಗಳು ಹಾಗೂ ಮನೆಗೆ ಬೇಕಾಗುವ ಟಿವಿ, ಫ್ರಿಡ್ಜ್, ಕೂಲೆರ್, ಏರ್ ಕಂಡೀಷನ್ ಹೀಗೆ ಅನೇಕ ಮನೆ ವಸ್ತು ಈ ಹಬ್ಬದ ದಿನ ಖರೀದಿ ಮಾಡಿದರೆ, ವಾಹನ ಮತ್ತು ವಸ್ತು ಗಳು ಹೆಚ್ಚು ಲಾಭದಾಯಕ ಹಾಗೂ ಒಳ್ಳೆಯ ಯಶಸ್ಸು ದೊರಕುತ್ತದೆ ಎಂದು ನಂಬಿಕೆ, ರೈತರ ತಮ್ಮ ಮುಂಗಾರು ಸುಗ್ಗಿ ಮಾಡಿ ಬಂದ ಹಣದಲ್ಲಿ ಹೊಸ ಕಾರ್ಯ ಮಾಡುವರು.

### * ಸಿಹಿ ತಿಂಡಿ ತಿನ್ನು ಮಾಡುವ ವಿಶೇಷ ಹಬ್ಬ:

ಪ್ರತಿ ಹಬ್ಬದಲ್ಲಿ ಒಂದಿಲ್ಲ ಒಂದು ಸಿಹಿ ಮಾಡಿ ಊಟ ಮಾಡುವುದು ಸರ್ವೆ ಸಾಮಾನ್ಯ ಆದರೆ, ದೀಪಾವಳಿ ಹಬ್ಬಕ್ಕೆ ಮಾತ್ರ ಎಲ್ಲರೂ ವಿಶೇಷ ತಿಂಡಿ ಮಾಡುವ ರೂಡಿ ಇದೆ, ಈ ದಿನ ಲಡ್ಡು, ಕರೀಜಿಕಾಯಿ, ಜಾಮೂನ, ಬಾಲುಶಾ, ಮೈಸೂರ ಪಾಕ, ಡ್ರೈ ಫ್ರೂಟ್ ಲಡ್ಡು, ಅನಾರಷ್ಯಾ ಡಿಂಕ ಲಾಡು, ಹಾಗೂ ಖಾರ ಪದಾರ್ಥದಲ್ಲಿ ಸೇವಖಾರಾ, ಕುರುಟಗಿ, ಚೂಡವಾ, ಕೊಡಬೇಳಿ, ಪಾಪದ, ಹೀಗೆ ಹೇಳಿದರೆ ಮುಗಿಯದೆ ಅನೇಕ ಪದಾರ್ಥ ಗಳನ್ನು ಮಾಡಿ ಸಂಭ್ರಮ ದಿಂದ ಪರಿವಾರ ಬಂದು ಬಳಗದವರು ಸೇರಿ ತಿನ್ನುವರು.

### * ಹೊಸ ಬಟ್ಟೆ ಮತ್ತು ಪಟಾಕಿ:

ದೀಪಾವಳಿ ಹಬ್ಬಕೆ ಹೊಸ ಬಟ್ಟೆ ಉಡುಪು, ಸಂಸ್ಕೃತಿಕ ಬಟ್ಟೆ ಧರಿಸಿ ಪೂಜೆ ಮಾಡುವ ಪರಂಪರೆ ಇದೆ.

ಪುಟ್ಟ ಮಕ್ಕಳಿಗೆ ಈ ಹಬ್ಬ ಹೆಚ್ಚು ಪ್ರಿಯೇ ಏಕೆಂದರೆ ಹಬ್ಬದ ಸಂಭ್ರಮ ಒಂದಡೇ ಆದರೆ ಪೂಜೆ ನಂತರ ಪಟಾಕಿ ಸಿಡಿಸಿ ಸಂತಸ ಪಡುವ ಕ್ಷಣ, ಸುರ್ ಸುರ್ ಬತ್ತಿ, ಬತ್ತಿ ಪಟಾಕಿ, ಹಸಿರು ಪಟಾಕಿ, ರಾಕೆಟ್, ಬೆಳ್ಳುಳ್ಳಿ ಪಟಾಕಿ, ಡಮ್ಮಿ ಬಂದೂಕು, ಚುಟಕಿ ಪಟಾಕಿ, ಬೀಡಿ ಬಾಂಬ, ಕಿಟ್ ಕ್ಯಾಟ, ಅನರಕಲಿ, ಟೈಮ್ ಬಾಂಬ, ಚಕ್ರ, ಹಾವಿನ್ ಗೋಲಿ ಹೀಗೆ ವಿವಿಧ ಪ್ರಕಾರದ ಪಟಾಕಿ ಸಿಡಿಸಿ ಸಂತಸ ಪಡುವ ಹಬ್ಬ ದೀಪಾವಳಿ.

ಮನೆ ತುಂಬಾ ದೀಪ ಹಾಗೂ ಬಾಗಿಲಿಗೆ ಅಲಂಕಾರ ದೀಪ:

ದೀಪಾವಳಿ ಹಬ್ಬದ ದಿನ ಮನೆ ತುಂಬಾ ಸಾಲಾಗಿ ದೀಪಗಳು ಹಚ್ಚುವರು, ಅಮಾವಾಸ್ಯೆ ಕತ್ತಲೆ ದಿನ ದೀಪ ಬೆಳಗಿ ಬೆಳಕನ್ನು ಸಂಭ್ರಮಿಸುವ ಹಬ್ಬ, ಮನೆ ಬಾಗಿಲಿಗೆ ಅಲಂಕಾರ ಮಾಡಿದ ವಿದ್ಯುತ ದೀಪ (ಆಕಾಶ ದೀಪ) ಕಟ್ಟುವರು ಮನೆಗೆ ಹೊಸ ನೋಟ ನೀಡುವಂತೆ ತಳಿರು ತೋರಣ ಕಟ್ಟಿ ಹಬ್ಬದ ಆಕರ್ಷಣೆ ಹೆಚ್ಚಿಸುತ್ತದೆ.

ದೀಪಾವಳಿ ನಂತರ ದಿನವನ್ನು ಸಹೋದರ-ಸಹೋದರಿ ಶುಭ ಕೋರುವವರು:

ಹಬ್ಬದ ನಂತರ ಬಲಿಪಾಡ್ಯ ದಿನವನ್ನು ಸಹೋದರ-ಸಹೋದರಿ ಶುಭ ಕೋರುವವರು ಇದನ್ನು ಭಾಯಿ ದೂಜ್ ಅಥವಾ ಯಮದ್ವಿತೀಯ ಎಂದು ಕರೆಯಲಾಗುತ್ತದೆ. ಈ ದಿನಸಹೋದರಮತ್ತುಸಹೋದರಿಯರಬಾಂಧವ್ಯವನ್ನು ಆಚರಿಸಲಾಗುತ್ತದೆ. ಸಹೋದರಿಯರು ತಮ್ಮ ಸಹೋದರರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತಾರೆ ಮತ್ತು ಸಹೋದರರು ತಮ್ಮ ಸಹೋದರಿಯರನ್ನು ರಕ್ಷಿಸುವ ಪ್ರತಿಜ್ಞೆ ಮಾಡುತ್ತಾರೆ.



ಆಚರಣೆಗಳು: ಸಹೋದರಿಯರು ತಮ್ಮ ಸಹೋದರರ ಹಣೆಯ ಮೇಲೆ ತಿಲಕವನ್ನು ಹಚ್ಚಿ, ಆರತಿ ಮಾಡುತ್ತಾರೆ. ಸಹೋದರನ ಆಯುಷ್ಯ ಅರೋಗ್ಯ ಸಿಗಲಿ ಎಂದು ಸೊಂಟಕ್ಕೆ ದಾರ ಕಟ್ಟುವರು,ಸಹೋದರರು ಉಡುಗೊರೆಗಳನ್ನು ನೀಡುತ್ತಾರೆ ಮತ್ತು ತಮ್ಮ ಸಹೋದರಿಯರ ರಕ್ಷಣೆಗಾಗಿ ವಾಗ್ದಾನ ಮಾಡುತ್ತಾರೆ. ಈ ಹಬ್ಬವು ಸಹೋದರ-ಸಹೋದರಿಯರ ನಡುವಿನ ಪ್ರೀತಿ, ವಿಶ್ವಾಸ ಮತ್ತು ರಕ್ಷಣೆಯ ಬಾಂಧವ್ಯವನ್ನು ಬಲಪಡಿಸುತ್ತದೆ.


ಒಟ್ಟಾರೆ ನೋಡುವುದ್ದಾರೆ, ದೀಪಾವಳಿ ಹಬ್ಬ ದುಡ್ಡಿನ ಮಳೆ ಹರಿಸಿ ಮಾಡುವ ಹಬ್ಬವಾಗಿದೆ, ಎಲ್ಲೋ ಲೆಕ್ಕಹಾಕಿ ಖರ್ಚು ಮಾಡಿ, ಹಬ್ಬ ಮಾಡಬೇಕು, ಇನ್ನೊಬ್ಬರ ನೋಡಿ ಖರ್ಚು ಮಾಡಿದರೆ ಸಾಲ ಆಗುವುದು ಕಟ್ಟಿಟ್ಟ ಪುಟ್ಟಿ,

ಹಾಗಾಗಿ ಹೆಚ್ಚು ದುಡ್ಡ ಖರ್ಚು ಮಾಡಿದರೆ ಹಬ್ಬ ಇಲ್ಲಾ ಅಂದ್ರೆ ಇಲ್ಲಾ ಅಂತಾ ಅಲ್ಲಾ ನಾವು ಮಾಡುವ ಆಚರಣೆಯಲ್ಲಿ ಭಕ್ತಿ ಇದ್ದರೆ ಆ ದೇವರಿಗೆ ತಲುಪುತ್ತದೆ. ಮಕ್ಕಳು ಪಟಾಕಿ ಹೊಡಿಯುವಾಗ ಮುಂಚೆ ಎಚ್ಚರ ದಿಂದ ಹೊಡೆಯುವಂತೆ ಪಾಲಕರು ಗಮನ ಹರಿಸಬೇಕು, ಎಲ್ಲರಿಗೆ ದೀಪಾವಳಿ ಹಬ್ಬದ ಶುಭವನ್ನೇ ಮಾಡಲಿ ಎಂದು ದೀಪಾವಳಿ ಹಬ್ಬದ ಶುಭಾಶಯಗಳು ಕೋರುತ್ತೇವೆ.



ಲೇಖನ: ಪರಮೇಶ ರಾಂಪುರೆ
ಇಮೇಲ್:rajahuliparmesh@gmail.com
ಮೊ:9980209238



# ಸಂತರ ಸಂಗದಿಂದ ಸುಂದರ ಸಮಾಜ ನಿರ್ಮಾಣ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಅ.20:ಸುಂದರ ಸಮಾಜ ನಿರ್ಮಾಣಕ್ಕೆ ಸಮಾಜದ ಪ್ರತಿಯೊಬ್ಬರು ಪ್ರತಿನಿತ್ಯ ಸಾಧು ಸಂತರ, ಮಹಾತ್ಮರ, ಸದ್ಗುಣಿಗಳ ಸಂಪರ್ಕದಲ್ಲಿ ಇರಬೇಕು ಎಂದು ಹುಲಸೂರಿನ ಶಿವಾನಂದ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹಲಬರ್ಗಾ ಗ್ರಾಮ ಸಮೀಪದ ಪಿಯು ಕಾಲೇಜಿನ ಬಳಿಯ ಹನುಮಾನ ದೇವಸ್ಥಾನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಹನುಮಾನದೇವರ ಮೊದಲ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಗ್ರಾಮದಲ್ಲಿ ಮೇಲಿಂದ ಮೇಲೆ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಪರಸ್ಪರ ಸಹಕಾರದ ಗುಣಗಳನ್ನು ಬೆಳೆಸುತ್ತವೆ ಎಂದರು.

ಜೈ ಭಾರತ ಮಾತಾ ಸೇವಾ ಸಮಿತಿಯ ರಾಷ್ಟ್ರೀಯ ಸಂಸ್ಥಾಪಕ ಅಧ್ಯಕ್ಷ ಹವಾ ಮಲ್ಲಿನಾಥ ಮಹಾರಾಜರು, ಹಾವಗಿಲಿಂಗೇಶ್ವರ ಶಿವಾಚಾರ್ಯರು, ಮಳಚಾಪೂರಿನ ಸದ್ರೂಪಾನಂದ ಸ್ವಾಮೀಜಿ ಮಾತನಾಡಿದರು.

ಇದಕ್ಕೂ ಮೊದಲು ಗ್ರಾಮದ ಹನುಮಾನ ದೇವಸ್ಥಾನದಿಂದ ಪಿಯು ಕಾಲೇಜಿನ ಬಳಿಯ ಹನುಮಾನ ದೇವಸ್ಥಾನದವರೆಗೆ

ಎಲ್ಲ ಪೂಜ್ಯರನ್ನು ತೆರೆದ ವಾಹನಗಳಲ್ಲಿ ಕೂಡಿಸಿಕೊಂಡು ಭವ್ಯ ಮೆರವಣಿಗೆ

ನಡೆಸಲಾಯಿತು.

ಮೆರವಣಿಗೆಯಲ್ಲಿ ಕುಂಭ ಕಳಸ ಹೊತ್ತ ಮಹಿಳೆಯರು, ಯುವಕರು, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಪ್ರಮುಖರಾದ ಪಪ್ಪು ಪಾಟೀಲ, ಪ್ರಕಾಶ ಪ್ರಭಾ, ಉದಯಕುಮಾರ ಮೂಲಗೆ, ಪಿಂಟು ಠಾಕೂರ್, ರಾಮಸಿಂಗ್ ಠಾಕೂರ್, ಮಲ್ಲಪ್ಪ ತೆಲಂಗ, ರಮೇಶ ತೆಲಂಗ, ಕೃಷ್ಣಾ ತೆಲಂಗ, ಸುಧಾಕರ ಯಡೂರು, ವಿಜಯಕುಮಾರ ಬರದಪುರೆ, ರಾಜಕುಮಾರ ಕಟರ್,

ರಾಹುಲ್ ಪಾಟೀಲ ಸೇರಿದಂತೆ ಅನೇಕರು ಇದ್ದರು.

# ಭವಸಾಗರ ದಾಟಿಸುವ ನೌಕೆಯೇ ಸತ್ಸಂಗ : ಗಣೇಶಾನಂದ ಮಹಾರಾಜರು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.20: ಸತ್ಸಂಗವು ಭವಸಾಗರ ದಾಟಿಸುವ ನೌಕೆಯಾಗಿದೆ ಎಂದು ಗುರುದೇವಾಶ್ರಮ ಬೀದರ ಹಾಗು ಬಬಚ್ಚಡಿ ಆಶ್ರಮದ ಶ್ರೀ ಗಣೇಶಾನಂದ ಮಹಾರಾಜರು ಪ್ರತಿಪಾದಿಸಿದರು.

ಬೆಳ್ಳೂರ ಗ್ರಾಮದ ಶ್ರೀ ಸಚ್ಚಿದಾನಂದ ಆಶ್ರಮ, ಶ್ರೀ ಸಿದ್ಧಾರೂಢ ಮಠದಲ್ಲಿ ನಡೆದ ಸದ್ಗುರು ಶ್ರೀ ಸಿದ್ಧಾರೂಢರ 19ನೇ ವಾರ್ಷಿಕೋತ್ಸವ ಹಾಗು ಸದ್ಗುರು ಶ್ರೀ ಸಚ್ಚಿದಾನಂದ ಮಹಾಸ್ವಾಮಿಗಳ 29ನೇ ಪುಣ್ಯಾರಾಧನೆ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು.



ಶ್ರೀಮಠವು ಭಕ್ತರ ಆಸ್ತಿ, ಶ್ರೀ ಸಿದ್ಧಾರೂಢರ ಭಕ್ತರ ಸಹಕಾರದಿಂದಲೇ ಎಲ್ಲಾ ಕಾರ್ಯಕ್ರಮಗಳು ನಡೆಯುತ್ತಲಿವೆ. ಸದ್ಗುರು ಶ್ರೀ ಸಿದ್ಧಾರೂಢರು ಎಲ್ಲರ ಮನೆ, ಮನದಲ್ಲಿ ವಾಸವಾಗಿದ್ದಾರೆ. ಮಾತೋಶ್ರೀ ಅಮೃತಾನಂದಮಯಿ, ಶ್ರೀಸಚ್ಚಿದಾನಂದಾಶ್ರಮ ಶ್ರೀ ಸಿದ್ಧಾರೂಢ ಮಠ ಬೆಳ್ಳೂರ.

ಪರಮಾತ್ಮನನ್ನು ತಿಳಿಯಲು ವಿವೇಕ ಜನಿತ ಬುದ್ಧಿಯ ಅವಶ್ಯಕತೆ ಇದೆ. ಆ ಬುದ್ಧಿ ಜಾಗೃತಿಗಾಗಿ ಸತ್ಸಂಗ ಅತ್ಯವಶ್ಯಕ. ಅಜ್ಞಾನದ ಆವರಣದಿಂದ ಆತ್ಮದ ಅರಿವು ನಮಗಾಗುತ್ತಿಲ್ಲ, ಅಜ್ಞಾನದ ಪರದೆ ಸರಿಸಿ, ಆತ್ಮವೇ ತಾನಾಗಿ ಉಳಿದರೆ, ದೇವಾಸನೆ ನಿವಾರಣೆಯಾಗಿ ಸಚ್ಚಿದಾನಂದ ಸ್ವರೂಪವೇ ನಾವಾಗುವೆವು. ಹೀಗಾಗಿ ನಮ್ಮನ್ನು ನಾವು ತಿಳಿಯಲು ಸತ್ಸಂಗದಲ್ಲಿರಬೇಕು ಎಂದು ಹೇಳಿದರು. ನಾಗಭೂಷಣ ಶಿವಯೋಗಿ ಮಠ ಮುಚಳಂಬಿಯ ಶ್ರೀ ಪ್ರಣವಾನಂದ ಸ್ವಾಮಿಗಳು ಮಾತನಾಡಿ, ಅಂತರಂಗದಲ್ಲಿ ಗುರುಗಳ ಬಗ್ಗೆ ಶ್ರದ್ಧಾಭಾವ ಇಲ್ಲದಿದ್ದರೆ ಪ್ರತಿಫಲ ಸಿಗುವುದಿಲ್ಲ. ಗುರುವಿನ ಮೇಲೆ ಶ್ರದ್ಧೆ ಬಹುಮುಖ್ಯವಾಗಿದೆ ಎಂದು ಹೇಳಿದರು.

ಗುರುದೇವಾಶ್ರಮದ ಮಾತೆ ಸಿದ್ದೇಶ್ವರಿತಾಯಿ ಮಾತನಾಡಿ, ಎಲ್ಲರೂ ಬಯಸುವದು ಶಾಸ್ವತವಾದ ಅನಂದ, ಅಂತಹ ಶಾಸ್ವತ ಆನಂದ ದೊರೆಯಲು ಶ್ರದ್ಧೆಯಿಂದ ಗುರುವಾಕ್ಯದಂತೆ ಪ್ರಯತ್ನಶೀಲರಾಗಿ ಸಾಧನೆ ಮಾಡಬೇಕು ಎಂದು ಹೇಳಿದರು.

ಗೋಪಾಲಶಾಸ್ತ್ರಿ ಕಲ್ಲಹಂಗರಗಾ, ಗುಂಡಪ್ಪಾ ಶರಣರು, ಮಾತೋಶ್ರೀ ಸಂಗೀತಾದೇವಿ, ಮಳಚಾಪೂರ ಶಂಭುಲಿಂಗಾಶ್ರಮದ ಶ್ರೀ ಸದ್ರುಪಾನಂದ ಭಾರತಿ ಸ್ವಾಮಿಗಳು ಶ್ರಧಾವಾನ ಲಭ್ಯತೆ ಜ್ಞಾನಂ ವಿಷಯದ ಮೇಲೆ ಪ್ರವಚನ ಮಾಡಿದರು. ಶ್ರೀಮಠದ ಮಾತಾಜಿ ಅಮೃತಾನಂದ ತಾಯಿಯವರು ಅಧ್ಯಕ್ಷತೆವಹಿಸಿ ಮಾತನಾಡಿದರು. ಇದೇವೇಳೆ ಮಠದ ಭಕ್ತರಾದ ನೀತು ಶೈಲೇಂದ್ರ ಬೆಲ್ದಾಳೆ, ವೈಜಿನಾಥಪ್ಪದಾಬಶೆಟ್ಟಿನಾವದಗಿ, ಬಾಬುರಾವ ದಾನಿ, ನಾಗರಾಜ ಜೋಗಿ, ಮಲ್ಲಿಕಾರ್ಜುನ ನುಚ್ಚಾ, ಶಿವಾನಂದ ಮಠಪತಿ ಹುಮನಾಬಾದ ರವರಿಗೆ ಶ್ರೀಮಠದಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಂಭು ಶಂಕರ ಕೊಳಾರ(ಕೆ), ಶಾಂತಕುಮಾರ ಚಂದಾ, ಡಾ|ಕಾಶಿನಾಥ ಗುಮ್ಮಾ, ಶಶಿಕಲಾ, ದೇವಿ ಶಾಂತಕುಮಾರ, ವಿಜಯಕುಮಾರ ಎಮ್. ಎಸ್.ಪಾಟೀಲ, ನಾಗಶೆಟ್ಟಿ ಕುಂಬಾರವಾಡಾ,

ಸುಭಾಷರೆಡ್ಡಿನಕ್ಕ, ಶಾಂತಕುಮಾರ ವಿಶ್ವಕರ್ಮ, ಪಾರ್ವತಿ ಗುರಣ್ಣ, ರಾಜೇಶ್ವರಿ ಖೇಣಿರಂಜೋಳ, ಮಲ್ಲಿಕಾರ್ಜುನ ಶರಗಾರ,

ಸುಭಾಷ ಗುಂಡಪ್ಪ ಮೇತ್ರೆ, ಬಸಮ್ಮಾ ಭೀಮರಾವ ಸಂತಪೂರೆ, ಬಸಮ್ಮಾ ಶರಣಪ್ಪಾ ಗುಮ್ಮಾ, ಪ್ರಭಾವತಿ ಬಾಬುರಾವ, ಉಪಸ್ಥಿತರಿದ್ದರು. ಪಂಡಿತ ರಾಮುಲು ಗಾದಗಿ ಮತ್ತು ನಾಗರಾಜ ಜೋಗಿಯವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಸಂಜುರೆಡ್ಡಿ ಝುಂಪಾ ಬೆಳ್ಳೂರ ಸ್ವಾಗತಿಸಿದರು. ಸವಿತಾ ಗುರುನಾಥ ನಿರೂಪಿಸಿದರು. ಭೀಮರೆಡ್ಡಿ ಝುಂಪಾ ವಂದಿಸಿದರು.

# 151 ಜೋಡಿಗಳ ಸರಳ ಸಾಮೂಹಿಕ ವಿವಾಹ: ಖರ್ಗೆ ಶಾರದಾಬಾಯಿ ಟ್ರಸ್ಟ್ ವತಿಯಿಂದ ಭವ್ಯ ಆಯೋಜನೆ



ಬೀದರ್. ಅ. 20 : ಬೀದರ್ ತಾಲೂಕಿನ ರಾಜೀವ್ ಗಾಂಧಿ ಪದವಿ ಪೂರ್ವ ಆವರಣದಲ್ಲಿ ಖರ್ಗೆ ಶಾರದಾಬಾಯಿ ಎಜುಕೇಶನ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ), ಜನತಾ ಪ್ರವೀಣ್ ಶಿಕ್ಷಣ ಸಂಸ್ಥೆ ಹಾಗೂ ಖರ್ಗೆ ಮಾಣಿಕರಾವ್ ಮೆಮೊರಿಯಲ್ ಶಿಕ್ಷಣ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ "ಸರಳ ಸಾಮೂಹಿಕ ವಿವಾಹ" ಕಾರ್ಯಕ್ರಮ ಭವ್ಯವಾಗಿ ನೆರವೇರಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ಧಮ್ಮಾನಂದ ಭಂತೆಜೀ ವಹಿಸಿದ್ದು, ಕಾರ್ಯಕ್ರಮವನ್ನು ಸಂಸದರಾದ ಸಾಗರ್ ಖಂಡ್ರೆ ಜೀ ಅವರು ಉದ್ಘಾಟಿಸಿ, ವಿವಾಹಿತ ದಂಪತಿಗಳಿಗೆ ಆಶೀರ್ವಾದ ಹಾಗೂ ಶುಭಾಶಯ ಕೋರಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಶ್ರೀ ಅನಿಲ್ ಕುಮಾರ್ ಮೇಲ್ದೊಡ್ಡಿ, ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ವಿಠಲ್ ದಾಸ್ ಪ್ಯಾಗೆ, ಜ್ಞಾನೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಕಾಶಿನಾಥ್ ಚಲ್ವ, ಹಾಜರಿದ್ದರು.

ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿದ್ದವರು ರಾಚಪ್ಪ ಖರ್ಗೆ ಆಗಿದ್ದು, ಗೌರವ ಅಧ್ಯಕ್ಷತೆ ಯುಗಪುರುಷ ಚತುರೆ ವಹಿಸಿದರು.

ಇದೇ ವೇಳೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ, ನಗರಸಭೆ ಸದಸ್ಯ ಹಣಮಂತ ಮಲ್ಕಾಪೂರೆ, ಮಾಜಿ ಸದಸ್ಯ ಧನರಾಜ್ ಹಂಗರಗಿ, ಮಹಾನಗರ ಪಾಲಿಕೆ ಸದಸ್ಯ ಸೂರ್ಯಕಾಂತ್ ಸಾದುರೆ, ಓಬಿಸಿ ಜಿಲ್ಲಾ ಉಪಾಧ್ಯಕ್ಷ ಮುಕೇಶ್ ಚಲ್ವಾ, ಯುವ ಮುಖಂಡರು ಪವನ ಮಿಠಾರೆ ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು.

ಸಾಮೂಹಿಕ ವಿವಾಹದ ಯಶಸ್ವಿ ಆಯೋಜನೆಗೆ ಭೀಮರಾವ್ ಮಾಲಗತ್ತಿ, ಮಲ್ಲಿಕಾರ್ಜುನ ಕಪಲಾಪುರೆ, ಮಿಲಿಂದ ಕಾಂಬ್ಳೆ, ಅಮರ ಸಾಗರ, ರಮದೇವಿ ಸ್ವಾಮಿ, ದೀಲಿಪ್, ಹರೀಶ, ಗೌತಮ್ಮ ಮುತಂಗಿಕರ, ಚಂದ್ರಕಾಂತ ಕಾಂಬ್ಳೆ, ದೇವರಾಜ್ ಪಾಟೀಲ್, ರಾಜಶೇಖರ್ ಸೊರಳಿ ಮುಂತಾದವರು ಶ್ರಮಿಸಿದರು.

ಈ ಸರಳ ಮತ್ತು ಸಾಂಪ್ರದಾಯಿಕ ವಿವಾಹದಲ್ಲಿ ಒಟ್ಟು 151 ವಧು–ವರರು ಭಾಗವಹಿಸಿ ಜೀವನದ ಹೊಸ ಪಯಣ ಆರಂಭಿಸಿದರು.

# ಮೀನಕೇರಾ; ಗವಿ ವೀರಭದ್ರೇಶ್ವರ ರಥೋತ್ಸವ ನಾಳೆ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಅ.20:ತಾಲೂಕಿನ ಮೀನಕೇರಾ ಗ್ರಾಮದ ಗವಿ ವೀರಭದ್ರೇಶ್ವರರ 71ನೇಯ ಜಾತ್ರಾ ಮಹೋತ್ಸವವೂ ಇಂದಿನಿಂದ ಆರಂಭವಾಗಲಿದ್ದು, ಸಡಗರ ಸಂಭ್ರಮದ ನಡುವೆ ಜಾತ್ರಾ ಮಹೋತ್ಸವಕ್ಕೆ ಆಡಳಿತ ಮಂಡಳಿಯವರು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಇಂದು ಮುಂಜಾನೆ 10 ಗಂಟೆಗೆ ಗ್ರಾಮದ ಹನುಮಾನ ಮಂದಿರದಿಂದ ಬಸವಕಲ್ಯಾಣ ಗವಿಮಠದ ಡಾ. ಅಭಿನವ ಘನಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ತುಂಬಿದ ಕಳಶ ಮೆರವಣಿಗೆಯೂ ವೀರಭದ್ರೇಶ್ವರ ಮಂದಿರದವರೆಗೆ ಜರುಗಲಿದೆ. ಬಳಿಕ ಮೀನಾಕ್ಷಿ ಉದಯಕುಮಾರ

ಸಿಂಧೋಲ ಹಾಗೂ ರೂಪಾ ಗೌರೀಶ ಭಾಗಿರಥಿ ಅವರಿಂದ



ಸುಮಂಗಲಿಯರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ. ರಾತ್ರಿ 8 ಗಂಟೆಗೆ ವಿಜಯಕುಮಾರ ವಿಶ್ವಕರ್ಮ ಪುರವಂತರ ತಂಡದಿಂದ ಪುರವಂತಿಕೆ ಸೇವೆಯೊಂದಿಗೆ ನಾನಾ ಕಲಾ ತಂಡಗಳೊಂದಿಗೆ ಭವ್ಯ ಪಲ್ಲಕ್ಕಿ ಉತ್ಸವ ಮೆರವಣಿಗೆ. ರಾತ್ರಿ 10 ಗಂಟೆಗೆ ಅಗ್ನಿ ಪೂಜೆ. 11 ಗಂಟೆಗೆ ವೀರಭದ್ರೇಶ್ವರ ಹವ್ಯಾಸಿ ನಾಟ್ಯ ಸಂಘದ ವತಿಯಿಂದ ಸುಂದರ ಸಾಮಾಜಿಕ ನಾಟಕ ಪ್ರದರ್ಶನ ಮಾತು ಬಿದ್ದಿತು ಮೌನ ಗೆದ್ದಿತು ನಡೆಯಲಿದೆ. ನಾಳೆ ಬೆಳಗ್ಗೆ 10 ಗಂಟೆಯಿಂದ ವಾಲಿಬಾಲ ಪಂದ್ಯಾವಳಿಗಳು, ರಾತ್ರಿ 9 ಗಂಟೆಗೆ ರಥೋತ್ಸವ ಹಾಗೂ ಮದ್ದುಗುಂಡು ಸುಡುವುದು. ಬಳಿಕ ಸುಂದರ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. 23ರಂದು ಬೆಳಗ್ಗೆ ಜಂಗಿ ಕುಸ್ತಿ ಪಂದ್ಯಾವಳಿಗಳು, ರಾತ್ರಿ ಪಲ್ಲಕ್ಕಿ ನಿರ್ಗಮನ ಸೇರಿದಂತೆ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ

ದೇವರ ದರ್ಶನ ಪಡೆದುಕೊಳ್ಳುವಂತೆ ದೇವಸ್ಥಾನದ ಅಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರು ಮನವಿ

# ಆರ್‌ಎಸ್ ಎಸ್ ಪಥಸಂಚಲನದಲ್ಲಿ ಸರ್ಕಾರಿ ವೈದ್ಯ ಭಾಗಿ

ಕಲಬುರಗಿ:ಅ.20: ಸೇಡಂನಲ್ಲಿ ಭಾನುವಾರ ನಡೆದ ಆರ್‌ಎಸ್ ಎಸ್ ಪಥಸಂಚಲನ ಕಾರ್ಯಕ್ರಮದಲ್ಲಿ ಸರ್ಕಾರಿ ವೈದ್ಯರೊಬ್ಬರು ಭಾಗಿಯಾಗಿದ್ದಾರೆ.

ಸೇಡಂ ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ ನಾಗರಾಜ್ ಮನ್ನೆ ಗಣವೇಶಧಾರಿಯಾಗಿ ಪಥ ಸಂಚಲನದಲ್ಲಿ ಭಾಗಿಯಾಗಿದ್ದಾರೆ. ಪಥಸಂಚಲನದಲ್ಲಿ ಭಾಗಿಯಾದ ವೈದ್ಯರ ಫೋಟೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ಅ.12 ರಂದು ರಾಯಚೂರಿನ ಲಿಂಗಸುಗೂರು ಪಟ್ಟಣದಲ್ಲಿ ನಡೆದ ಪಥಸಂಚಲನ ಕಾರ್ಯಕ್ರಮದಲ್ಲಿ ರೋಡಲಬಂಡಾ ಗ್ರಾಮದ ಪಿಡಿಒ ಪ್ರವೀಣ್ ಕುಮಾರ್ ಭಾಗವಹಿಸಿದ್ದಕ್ಕೆ ಚಾಯತ್ ರಾಜ್ ಇಲಾಖೆ ಆಯುಕ್ತೆ ಡಾ.ಅರುಂಧತಿ ಅವರು ಇಲಾಖಾ ತನಿಖೆ ಕಾಯ್ದಿರಿಸಿ ಅಮಾನತು ಮಾಡಿದ್ದರು.

ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಉಲ್ಲಂಘನೆ ಹಾಗೂ ಸರ್ಕಾರಿ ನೌಕರನ ತರವಲ್ಲದ ರೀತಿ ನಡೆದುಕೊಂಡಿದ್ದರಿಂದ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿತ್ತು.

# ಡಾ. ನಾಗಲಕ್ಷ್ಮಿ ಜನ್ಮ ದಿನ ನಿಮಿತ್ಯ ಅನುದಾನ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್. ಅ. 20: ಮಂಗಲಾ ಮಹಿಳಾ ಗ್ರಾಮೀಣ ಅಭಿವೃಧಿ ಸಂಸ್ಥೆ ಬೀದರ ವತಿಯಿಂದ ಮಹಿಳಾ ಆಯೋಗದ ಅಧ್ಯಕ್ಷರು ಡಾ. ನಾಗಲಕ್ಷ್ಮಿ ಚೌದ್ರಿ ಅವರ ಹುಟ್ಟು ಹಬ್ಬದ ಅಂಗವಾಗಿ ನಿರ್ಗತಿಕರಿಗೆ ಆಹಾರವನ್ನು ವಿತರಣೆ ಮಾಡುವುದರ ಮುಖಾಂತರವಾಗಿ ಹುಟ್ಟುಹಬ್ಬವನ್ನು ಆಚರಿಸಿದ್ದರು ಬೀದರ್ ಜಿಲ್ಲೆಯ ಹೋರಾಟಗಾರರಾದ ಸಂಗಮೇಶ್ ಭಾವಿದೊಡ್ಡಿ ಅವರು ಆಹಾರ ವಿತರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದವರು.

ಈ ಸಂಸ್ಥೆಯು ನಿರ್ಗತಿಕರಿಗೆ ಹಸಿವಿನಿಂದ ಬಳಲು ಇದ್ದಂತಹ ಜನಗಳ ಹೊಟ್ಟೆ ತುಂಬಿಸುವಂತಹ ಕಾರ್ಯಕ್ರಮವನ್ನು ಮಾಡಿದ್ದಕ್ಕೆ ಹರ್ಷವನ್ನು ವ್ಯಕ್ತಪಡಿಸಿ ಡಾ. ನಾಗಲಕ್ಷ್ಮಿ ಚೌದ್ರಿ ಅವರ ಆಸೆಯಂತೆ ಬಡವರ ಹೊಟ್ಟೆ ತುಂಬಿಸುವ ಕೆಲಸ ಮಾಡಿದ್ದು ನಿಜಕ್ಕೂ ನಾಗಲಕ್ಷ್ಮಿ ಮೇಡಮ್ ಅವರಿಗೆ ಒಳ್ಳೆಯ ಉಡುಗೊರೆ ಕೊಟ್ಟಂತೆ ಆಗಿದೆ ಎಲ್ಲಾದರಕ್ಕಿಂತಲೂ ಯಾವುದೇ ಭಾವಚಿತ್ರಗಳು ವಿಡಿಯೋಗಳು ಮಾಡದೇ ಇರುವುದು ಬಹಳಷ್ಟು ಸಂತೋಷ ತಂದಿದೆ ಎಂದು ಮಾತನಾಡಿ ಹರ್ಷವನ್ನು ವ್ಯಕ್ತಪಡಿಸಿದ್ದರು.

ಸಂಸ್ಥೆಯ ಅಧ್ಯಕ್ಷರಾದ ಮಂಗಲಾ ಮರಕಲೆ ಅವರು ಆಯಿ ಭವನೇಶ್ವರಿ ಡಾ. ನಾಗಲಕ್ಷ್ಮಿ ಅಕ್ಕನವರಿಗೆ ಬಡವರು ನಿರ್ಗತಿಕರು ವಿಶೇಷ ಚೇತನರು ಅವಕಾಶ ವಂಚಿತರು ಮಹಿಳೆಯರು ಮಕ್ಕಳು ಹಕ್ಕಿಗಾಗಿ ಹೋರಾಡುತ್ತಿರುವ ತಾಯಿಗೆ ಆಯಸ್ಸು ಆರೋಗ್ಯ ಸುಖ ಸಮೃದ್ಧಿ ಹಾಗೆ ಬಡವರ ಸೇವೆ ಮಾಡುವುದಕ್ಕೆ ಉನ್ನತ ಪದವಿಯನ್ನು ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಎಂದು ಶುಭವನ್ನು ಹಾರೈಸಿದ್ದರು. ಸತೀಶ್ ಬಿಳುಕೋಟಿ ಅವರು ಮಾತನಾಡಿ ಈ ಸಂಸ್ಥೆಯ ಕಾರ್ಯಗಳು ತುಂಬಾ ಒಳ್ಳೆ ರೀತಿಯಿಂದ ಅಚ್ಚುಕಟ್ಟಾಗಿ ಭಗವಂತನು ಮೆಚ್ಚುವಂತೆ ಕಾರ್ಯವನ್ನು ನಿರ್ವಹಿಸುತ್ತಿರುವದು ಅದರಲ್ಲೂ ಈಗಿನ ಕಾಲದಲಿ ಬನ್ನು ವಿತರಣೆ ಮಾಡಿ ಫೇಸ್ಬುಕ್ ವಾಟ್ಸಪ್ ಇನ್ಸ್ಟಾಲ್ ಸಾಮಾಜಿಕ ಜಾಲತಾಣದಲ್ಲಿ ನ್ಯೂಸ್ ಪೇಪರ್ ನಲ್ಲಿ ಹರಿಬಿಡುವುದನ್ನು ಗಮನಿಸಿದ್ದೇನೆ. ಆದರೆ ಈ ಕಾರ್ಯಕ್ರಮದಲ್ಲಿ ಅಂತಹ ತೋರಿಕೆ ರೀತಿಯಿಂದ ಕೆಲಸ ಮಾಡದೆ ಭಕ್ತಿಯಿಂದ ಮಾಡಿದ್ದೀರಾ ಭಗವಂತನು ಮಹಿಳಾ ಆಯೋಗದ ಅಧ್ಯಕ್ಷರಿಗೆ ಹಾಗೂ ಮಂಗಲ ಮಹಿಳಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಅನಂತ ಧನ್ಯವಾದಗಳು ಎಂದು ಹರ್ಷವನ್ನು ವ್ಯಕ್ತಪಡಿಸಿದ್ದರು.

ಈ ಕಾರ್ಯಕ್ರಮದಲ್ಲಿ ಪ್ರಶಾಂತ್ ಮೋರೆ ಮಂದಾಕಿಣಿ ಹೊಸಮನಿ ಸೋನು ಯೇನಗುಂದ ಸೇರಿದಂತೆ ಇನ್ನು ಇತರರು ಉಪಸ್ಥಿತರಿದ್ದರು.

# ಗುತ್ತೇದಾರ್ ವಿರುದ್ಧ ಷಡ್ಯಂತ್ರ:ಡಾ.ಪ್ರಣವಾನಂದ ಶ್ರೀ ಆರೋಪ

ಕಲಬುರಗಿ :ಅ.20: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂದು ಆಪಾದಿಸಿ ಎಸ್‌ಐಟಿ ಮೂಲಕ ಮಾಜಿ ಶಾಸಕರಾದ ಸುಭಾಷ್ ಆರ್ ಗುತ್ತೇದಾರ್ ಮತ್ತು ಅವರ ಮಕ್ಕಳ ಮನೆ ಮೇಲೆ ದಾಳಿ ಮಾಡಿ ರಾಜಕೀಯ ಭವಿಷ್ಯ ಮಟ್ಟ ಹಾಕಲು ಷಡ್ಯಂತ್ರ ಮಾಡಲಾಗುತ್ತಿದೆ ಎಂದು ಚಿತ್ತಾಪುರ ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದ ಪ್ರಣವಾನಂದ ಶ್ರೀಗಳು ಕಟುವಾಗಿ ಆರೋಪಿಸಿದ್ದಾರೆ. ಆಳಂದ ಮತಕ್ಷೇತ್ರದಿಂದ ಹಲವು ಬಾರಿ ಗೆದ್ದು ಶಾಸಕರಾಗಿದ್ದ ಸುಭಾಷ್ ಗುತ್ತೇದಾರ್ 2023 ರ ವಿಧಾನಸಭಾ ಚುನಾವಣೆಯಲ್ಲಿ ಸೋಲು ಅನುಭವಿಸಿದ್ದರು. ಆದರೆ ಈಗ ಅವರ ವಿರುದ್ಧ ಕ್ರಮಕ್ಕೆ ಮುಂದಾಗಿರುವುದು ಇದು ಸೇಡಿನ ರಾಜಕೀಯದ ಭಾಗವಾಗಿದೆ. ಇಡೀ ರಾಜ್ಯದಲ್ಲಿ ಈಡಿಗ, ಬಿಲ್ಲವ, ನಾಮಧಾರಿ, ನಾಯಕ ಸೇರಿದಂತೆ 26 ಪಂಗಡಗಳ ನಾಯಕರನ್ನು ರಾಜಕೀಯವಾಗಿ ಮುಗಿಸಲು ತೆರೆ ಮರೆಯಲ್ಲಿ ಹುನ್ನಾ ರ ನಡೆ–ಯುತ್ತಿದೆ. ಆಳಂದದಲ್ಲಿ ಸುಭಾಷ್ ಗುತ್ತೇದಾರ್ ಶಾಸಕರಾಗಿ ಅಭಿವೃದ್ಧಿ ಸಾಧಿಸಿರುವುದನ್ನು ಕ್ಷೇತ್ರದ ಜನ ಈಗಲೂ ಕೊಂಡಾಡುತ್ತಿದ್ದಾರೆ. ಗುತ್ತೇದಾರ್ ಮತ್ತು ಅವರ ಮಕ್ಕಳ ಮೇಲೆ ರಾಜಕೀಯ ಕುತ್ತು ಎಸಗಲು ಎಸ್‌ಐಟಿ ಮೂಲಕ ದಾಳಿ ನಡೆಸಲಾಗುತ್ತಿದೆ. ಆರು ತಿಂಗಳ ಹಿಂದೆ ಇದೇ ರೀತಿ ಸಂತೋಷ್ ಗುತ್ತೇದಾರ್ ಮನೆಯ ಮೇಲೆ ದಾಳಿ ಮಾಡಿ ಬಂಧನಕ್ಕೀಡು ಮಾಡಿರುವುದು ರಾಜಕೀಯ ದ್ವೇಷದ ಕಾರಣದಿಂದ ಹೊರತು ಬೇರೇನೂ ಅಲ್ಲ. ಮತಗಳ್ಳತನದ ಆಪಾದನೆ ಹೊರಿಸಿ ಮತ್ತೆ

ಗುತ್ತೇದಾರ್ ಮನೆಗಳ ಮೇಲೆ ದಾಳಿ ಮಾಡಿರುವುದು ಖಂಡನೀಯ ವಾಗಿದೆ.

# ಲಿಂಗರಾಜಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕ್ಯಾಂಪಸ್ ಸಂದರ್ಶನ

ಮಲ್ಲಮ್ಮ ನುಡಿ ವಾರ್ತೆ

ಬೀದರ್. ಅ. 20 : ನಗರದ ಹೊರವಯದಲ್ಲಿರುವ ಲಿಂಗರಾಜ ಅಪ್ಪ ತಾಂತ್ರಿಕ ಮಾಹದ್ಯಾಲಯದಾ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿ ಸೈಯದ್ ಶೋಯಭಅತ್ಕರ್ ಬೆಂಗಳೂರಿನ ಎಂಎಸ್ ರಾಮಯ್ಯ ಯುನಿವರ್ಸಿಟಿ ನಡೆಸಿದ ಪಿಂಚ್ ಪಲ್ಸ್ ಪ್ರವರ್ತಿ, ರಾಷ್ಟ್ರೀಯ ಟೆಕ್ನಿಕಲ್ ಪೆಸ್ಟಲ್ಲಿ ದ್ವಿತೀಯ ಸ್ಥಾನವನ್ನು ಪಡೆದು 7,000 ನಗದು ಬಹುಮಾನವನ್ನು ಸ್ವೀಕರಿಸಿದ್ದಾರೆ ಈ ಸಾಧನೆ ಮಾಡಿದ ,ವಿದ್ಯಾರ್ಥಿಗೆ




ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ, 9ನೇ ಪೀಠಾಧಿಪತಿಯಾದ ಪೂಜ್ಯ ದೊಡ್ಡಪ್ಪ ಅಪ್ಪ,ಅವರು ಹಾಗೂ ಸಂಘದ ಕಾರ್ಯದರ್ಶಿ ಹಾಗೂ ನಮ್ಮ ಮಹಾವಿದ್ಯಾಲಯದ ಕಾರ್ಯದರ್ಶಿಯಾದ ಶ್ರೀ ಬಸವರಾಜ್ ದೇಶಮುಖ ಅವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ, ಪ್ರಾಂಶುಪಾಲರಾದ ಡಾಕ್ಟರ್ ವಿನೀತಾ ಪಾಟೀಲ್ ಎಲ್ಲಾ ವಿಭಾಗದ ಮುಖ್ಯಸ್ಥರು ಅಧ್ಯಾಪಕ ವೃಂದದರು , ಅಭಿನಂದಿಸಿ ಶುಭ ಹಾರೈಸಿದರು .




# ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ
ಹುಮನಾಬಾದ್:ಅ.20:ಸಚಿವ ಪ್ರೀಯಾಂಕ ಖರ್ಗೆ ಅವರಿಗೆ ಜೀವ ಬೆದರಿಕೆ ಹಾಗೂ ಸಿ.ಜೆ.ಐ. ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆತ ಪ್ರಕರಣ ಖಂಡಿಸಿ, ಹುಮನಾಬಾದ್ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ದಲಿತ ಸಂಘಟನೆಗಳ ಒಕ್ಕೂಟ ಹಾಗೂ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಸೋಮವಾರ ಸಾಂ–ಕೇತಿಕ ಪ್ರತಿಭಟನೆ ನಡೆಸಲಾಯಿತು.

ಪ್ರವಾಸಿ ಮಂದಿರದಿಂದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದ ವರೆಗೆ ಒಂದು ದಿನದ ಸಾಂ–ಕೇತಿಕ ಪ್ರತಿಭಟನಾ ರ್ಯಾಲಿ ನಡೆಸಿ, ರಾಷ್ಟ್ರಪತಿ, ರಾಜ್ಯಪಾಲ ಹಾಗೂ ಮುಖ್ಯಮಂತ್ರಿಗೆ ಬರೆದ ಮನವಿ ಪತ್ರ ತಹಸೀಲ್ದಾರ್ ಅಂಜುಮ್ ತಬಸುಮ್ ಅವರಿಗೆ ಸಲ್ಲಿಸಲಾಯಿತು.

ವಿಧಾನ ಪರಿಷತ್ ಮಾಜಿ ಸದಸ್ಯ ಅರವಿಂದಕುಮಾರ ಅರಳಿ ಮಾತನಾಡಿ, ನ್ಯಾಯಾಧೀಶರ ಮೇಲೆ ಶೂ ಎಸೆತ ಹಾಗೂ ಸಚಿವರಿಗೆ ಹಾಕಿರುವ ಕೊಲೆ ಬೆದರಿಕೆ ತೀವ್ರವಾಗಿ ಖಂಡಿಸುತ್ತೇವೆ. ಅಸಂವಿಧಾನಿಕ ಪದಗಳನ್ನು ಬಳಕೆ ಮಾಡುವ ಮೂಲಕ ಕೊಲೆ ಬೆದರಿಕೆ ಹಾಕಿದವರಿಗೆ ಹಾಗೂ ಶೂ ಎಸೆದ ವಕೀಲನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ ಮಾಜಿ ಕೆ. ಪುಂಡಲಿಕ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನ್ನಾನ್ ಶೇಠ್, ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಓಂಕಾರ ತುಂಬಾ, ಅಂಕುಶ ಗೋಖಲೆ, ಪಂಡಿತರಾವ ಚಿದ್ರಿ, ಕೇಶವರಾವ ತಳಘಟಕರ್, ಗಣಪತಿ ಅಷ್ಟೂರೆ, ಪ್ರಭುರಾವ ತಾಳಮಡಗಿ, ಅನಿಲ ದೊಡ್ಡಿ, ಮನೋಜಕುಮಾರ ಜಾನವೀರ, ವಿಜಯಕುಮಾರ ನಾಥ, ರಾಹುಲ್ ಉದ್ದಾ ಮಾತನಾಡಿದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಜಿಪಂ. ಮಾಜಿ ಉಪಾಧ್ಯಕ್ಷ ಲಕ್ಷ್ಮಣರಾವ ಬುಳ್ಳಾ, ತಾಪಂ. ಮಾಜಿ ಅಧ್ಯಕ್ಷ ರಮೇಶ ಡಾಕುಳಗಿ, ಅಹ್ಮದ್ ಮೈನೋದ್ದಿನ್ ಅಫ್ಸರಮಿಯ, ಉಮೇಶ ಜಮಗಿ, ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ, ಪುರಸಭೆ ಉಪಾಧ್ಯಕ್ಷ ಮುಕ್ರಮ ಜಾ, ಮಲ್ಲಿಕಾರ್ಜುನ್ ಮಾಳಶೆಟ್ಟಿ, ದತ್ತಕುಮಾರ ಚಿದ್ರಿ, ಮಲ್ಲಿಕಾರ್ಜುನ್ ಮಹೇಂದ್ರಕರ್, ಉಮೇಶ ಕುಲಕರ್ಣಿ,

ರಾಹೀಲ್ ಖಿಲ್ಜಿ, ಶಿವಾನಂದ ಕಟ್ಟಿಮನಿ, ರವಿಚಂದ್ರ ಸಂಗಮ, ಸೈಯದ್ ಯಾಸೀನ್, ಲೋಕೇಶ ಮೇತ್ರೆ, ಸತೀಷ ರತ್ನಾಕರ,

ಶ್ರೀಧರ ಹಿರೇಮನಿ ಸೇರಿ ಅನೇಕರಿದ್ದರು.

# ಅಪರೂಪದ ಸಾಹಿತಿ ಬಸವರಾಜ ಐನೋಳಿ:ಪ್ರೊ. ಶೋಭಾದೇವಿ ಚೆಕ್ಕಿ



ಮಲ್ಲಮ್ಮ ನುಡಿ ವಾರ್ತೆ
ಚಿಂಚೋಳಿ :ಅ.20: ಶಿಕ್ಷಣ ಕ್ಷೇತ್ರದಲ್ಲಿ ಸಾರ್ಥಕ ಜೀವನ ಸಲ್ಲಿಸಿ ಮೌಲಿಕವಾದ ಹದಿನಾರು ಕೃತಿಗಳನ್ನು ನೀಡಿದ ಅಪರೂಪದ ಲೇಖಕ ಶಿಕ್ಷಕ ಸಾಹಿತಿ ಬಸವರಾಜ ಐನೋಳಿಯವರಾಗಿದ್ದಾರೆ. ಅವರ ಬರವಣಿಗೆ ವಿಶಾಲ ದೃಷ್ಟಿಕೋನ ಹೊಂದಿದೆ. ಶಿಕ್ಷಕರಾದವರು, ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರನೇಕರು ಶೈಕ್ಷಣಿಕ ಸಮಸ್ಯೆಗಳು ಹೇಳುತ್ತಾರೆ. ಅವುಗಳಿಗೆ ಪರಿಹಾರ ನೀಡುವವರು ಬಹಳ ಕಡಿಮೆ. ತಮ್ಮ ಬರಹದಲ್ಲಿ ಐನೋಳಿಯವರು ಸಮಸ್ಯೆಗಳಿಗೆ ಪರಿಹಾರವನ್ನು ತಿಳಿಸಿದ್ದಾರೆ. ಅವರು ಗಡಿನಾಡಿನಲ್ಲಿದ್ದು ಕನ್ನಡ ಕಟ್ಟುವ ಕೆಲಸದಲ್ಲೂ ಪ್ರಮುಖ ಪಾತ್ರವಹಿಸಿದ್ದಾರೆ. ಸಾಂಸ್ಕೃತಿಕ ಕ್ಷೇತ್ರದ ಸಂಘಟಕರಾಗಿದ್ದಾರೆಂದು ನಿವೃತ್ತ ಪ್ರಾಧ್ಯಾಪಕಿ, ಸಾಹಿತಿ, ಪ್ರೊ. ಶೋಭಾದೇವಿ ಚೆಕ್ಕಿಸೇಡಂ ಅವರು ಅಭಿಪ್ರಾಯಪಟ್ಟರು. ರವಿವಾರ ಇಲ್ಲಿನ ಚಂದಾಪುರ ಬಸವನಗರದ ಕಾಯಕನಿಲಯದಲ್ಲಿ, ಕಲಬುರ್ಗಿ ಜಿಲ್ಲಾ ಸಿರಿಗನ್ನಡ ವೇದಿಕೆ ಹಾಗೂ ಕಲ್ಬುರ್ಗಿ ಸಾಕ್ಷಿ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ ಸಾಹಿತ್ಯ ಸಮಾಗಮ – 3 ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಬಸವರಾಜ ಐನೋಳಿಯವರ ಬದುಕು ಬರಹ ಕುರಿತು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿರಿಗನ್ನಡ ವೇದಿಕೆ ಕಲ್ಬುರ್ಗಿ ಜಿಲ್ಲಾ ಘಟಕದ ಅಧ್ಯಕ್ಷ ಡಾ. ಗವಿಸಿದ್ದಪ್ಪ ಪಾಟೀಲರು "ಶಿಕ್ಷಕರು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಅಂಥವರ ಸಾಲಿನಲ್ಲಿ ಬಸವರಾಜ ಐನೊಳಿಯವರು ಒಬ್ಬರಾಗಿದ್ದಾರೆ. ಅವರ ಶಿಸ್ತು ಸರಳತೆ, ಸಾತ್ವಿಕ ವ್ಯಕ್ತಿತ್ವ ಅನುಕರಣೀಯವಾಗಿದೆ". ಅವರು ಬದುಕಿದಂತೆ ಬರೆದಿದ್ದಾರೆಂದರು. ಅತಿಥಿಗಳಾಗಿದ್ದ ಅ ಭಾ ಶ ಸಾ ಪರಿಷತ್ತು ಚಿಂಚೋಳಿ ತಾಲೂಕ ಘಟಕದ ಗೌರವಾಧ್ಯಕ್ಷ ಡಾ. ಮಲ್ಲಿಕಾರ್ಜುನ ಪಾಲಾಮೂರ ಮಾತನಾಡಿ; ಗಾಳಿಯಲ್ಲಿ ತೇಲಿ ಹಾರಾಡುವ ಗಾಳಿಪಟ ಎಲ್ಲರಿಗೂ ಕಾಣುತ್ತದೆ. ಆ ಗಾಳಿಪಟ ಬಾನಲ್ಲಿ ತೇಲುವಂತೆ ಮಾಡುವುದೇ ಒಂದು ತೆಳುವಾದ ದಾರ. ಆ ದಾರದಂತೆ ಬದುಕಿದವರು ಬಸವರಾಜ ಐನೋಳಿಯವರಾಗಿದ್ದಾರೆಂದರು.

ಉಪಸ್ಥಿತರಿದ್ದ ಬಸವರಾಜ ಐನೋಳಿಯವರು ಮಾತನಾಡಿ ಕಲಬುರ್ಗಿಯ ಎಸ್ ಬಿ ಕಾಲೇಜಿನಲ್ಲಿ ಓದುವಾಗ ಅಲ್ಲಿನ ಸಾಹಿತ್ತಿಕ ಸಾಂಸ್ಕೃತಿಕ ವಾತಾವರಣ ನನ್ನನ್ನು ಓದುಗನನ್ನಾಗಿ ರೂಪಿಸಿತು ಎಂದು, ತಮ್ಮ ವಿದ್ಯಾರ್ಥಿ ಜೀವನದ ಅನುಭವಗಳನ್ನು ಮೆಲುಕು ಹಾಕಿದರು. ಕಾರ್ಯಕ್ರಮದಲ್ಲಿ ಗೀತಾರಾಣಿ ಐನೋಳಿ ಸ್ವಾಗತಿಸಿದರು. ರೇವಣಸಿದ್ದಯ್ಯ ಹಿರೇಮಠ, ಶರಣಯ್ಯ ಸ್ವಾಮಿ ಅಲ್ಲಾಪುರ, ನಾಗೇಶ ಬಿ ಶೀಲವಂತ ಅವರು ವಚನ ಗಾಯನ ಮಾಡಿದರು. ಡಾ. ರಾಜಕುಮಾರ ಮಾಳಗೆ ನಿರೂಪಿಸಿದರು. ರಜತ ಐನೋಳಿ ವಂದಿಸಿದರು. ಕಾರ್ಯಕ್ರಮದಲ್ಲಿ ಡಾ. ಸಿದ್ದಪ್ಪ ಹೊಸ್ಮನಿ, ಶ್ರೀದೇವಿ ಪಾಟೀಲ್, ಡಾ. ಶೀಲಾದೇವಿ ಆಕಾಶ ತೆಗನೂರ, ರಾಮಯ್ಯ ಸ್ವಾಮಿ ಐನೋಳಿ ಡಾ. ವಿದ್ಯಾಸಾಗರ, ಎಸ್ ಎನ್ ದಂಡಿನ್ ಕುಮಾರ್, ಜ್ಯೋತಿ ಬೊಮ್ಮ, ಸುರೇಶ್ ದೇಶಪಾಂಡೆ, ಶಂಕರಜಿ ಹಿಪ್ಪರಗಿ, ಉತ್ತಮ ದೊಡ್ಮನಿ, ಕೈಲಾಸ ಜ್ಯೋತಿ, ಚನ್ನಬಸಯ್ಯ ಮಠ, ಸೂರ್ಯಕಾಂತ ಹುಲಿ,

ರಮೇಶ ಮಕಾಶಿ, ಚಂದ್ರಶೇಖರ ಲಗಶೆಟ್ಟಿ ಮತ್ತಿತರು ಉಪಸ್ಥಿತರಿದ್ದರು.

# ಪ.ಜಾ.ಅಭ್ಯರ್ಥಿಗಳಿಗೆ ಉದ್ಯಮ ಶೀಲತಾಭಿವೃದ್ಧಿ ತರಬೇತಿಗೆ ಅರ್ಜಿ

ರಾಯಚೂರು ಅ 20 : ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಕರ್ನಾಟಕ ಉದ್ಯಮಶಿಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಲು ಆಸಕ್ತರಿರುವ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿಯ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ರಾಯಚೂರನಲ್ಲಿ 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮವನ್ನು 2025ರ ಅಕ್ಟೋಬರ್ ಕೊನೆವಾರದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಸ್ವಯಂ ಉದ್ಯಮಗಳ ಬಗ್ಗೆ ಮಾಹಿತಿ, ಉದ್ಯಮಶೀಲತೆ, ಯಶಸ್ವಿ ಉದ್ಯಮಶೀಲರ ಗುಣಲಕ್ಷಣಗಳು, ನಾಯಕತ್ವದ ಗುಣಲಕ್ಷಣಗಳು, ಉದ್ಯಮವನ್ನು ಆಯ್ಕೆ ಮಾಡುವ ವಿಧಾನ, ವ್ಯಾಪಾರೋದ್ಯಮಗಳ ಅವಕಾಶಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ ಮಾಡುವ ಬಗ್ಗೆ, ಸಾಲ ಮತ್ತು ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳ ಬಗ್ಗೆ, ಲೆಕ್ಕ ಪತ್ರ ನಿರ್ವಹಣೆ, ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವದು ಹಾಗೂ ಈಗಾಗಲೇ ಸಿಡಾಕ್ ಮುಖಾಂತರ ತರಬೇತಿ ಪಡೆದು ಉದ್ಯಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವ ಉದ್ಯಮಶೀಲರ ಅನುಭವ ಹಂಚಿಕೆ ಮತ್ತು ಸಂಬಂಧಪಟ್ಟ ಇತ್ಯಾದಿ ವಿಷಯಗಳ ಬಗ್ಗೆ ಅನುಭವಿ ಅತಿಥಿ ಬೋಧಕರಿಂದ ಉಪನ್ಯಾಸ / ಮಾಹಿತಿ ನೀಡಲಾಗುವದು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವ 20 ರಿಂದ 45 ವರ್ಷದೊಳಗಿನ, ಕನಿಷ್ಠ ಎಸ್ಸೆಸ್ಸೆಲ್ಸಿ ಪಾಸ್/ಫೇಲ್ ಆದ ಪರಿಶಿಷ್ಟ ಜಾತಿಯ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಜಂಟಿ ನಿರ್ದೇಶಕರು, ಸಿಡಾಕ್, ಕಟ್ಟಡಸಂಖ್ಯೆ : 1–4–156(ಹಳೆಯ) 1–4–805(ಹೊಸ), ನಂದೀಶ್ವರ ಗುಡಿ ಹತ್ತಿರ, ನವೀನ್ ಹಾಸ್ಪಿಟಲ್ ಪಕ್ಕದಲ್ಲಿ, ಐ ಬಿರಸ್ತೆ, ರಾಯಚೂರು –584103 ಮೋಬೈಲ್ ಸಂಖ್ಯೆ 9986600631 ಇಲ್ಲಿಗೆ ಕರೆ ಮಾಡಿ ಅಕ್ಟೋಬರ್ 25 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಸಿಡಾಕ್‌ನ ಜಂಟಿ ನಿರ್ದೇಶಕರಾದ ಶ್ರೀ ಜಿ. ಯು. ಹುಡೇದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಕ್ತದಾನಿಗಳಾದ ಸತೀಶ್ ಫರ್ನಾಂಡಿಸ್, ಚಂದ್ರಪ್ಪ, ಬಸವರಾಜಗೆ ವಿಶೇಷ ಸನ್ಮಾನ



ರಾಯಚೂರು ಅ20:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ರೆಡ್ ರಿಬ್ಬನ್ ಕ್ಲಬ್‌ಗಳ ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 18ರಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯ ಸಭಾಂಗಣದಲ್ಲಿ, ಅತಿ ಹೆಚ್ಚು ಬಾರಿಗೆ ರಕ್ತದಾನ ಮಾಡಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. 70 ಬಾರಿ ರಕ್ತದಾನ ಮಾಡಿದ ಪೋತ್ನಾಳ ಗ್ರಾಮದ ಸತೀಶ್ ಫರ್ನಾಂಡಿಸ್, 50 ಬಾರಿಗೆ ರಕ್ತ ದಾನ ಮಾಡಿದ ರಾಯಚೂರಿನ ಚಂದ್ರಪ್ಪ ಮತ್ತು ಸಿಂಧನೂರಿನ ಬಸವರಾಜ ಹಾಗೂ 3 ಬಾರಿ ರಕ್ತ ದಾನ ಮಾಡಿದ ಕುಮಾರಿ ಮಲ್ಲಿಕಾ ಪೂಜಾರಿ ಅವರಿಗೆ ವಿವಿಧ ಗಣ್ಯರಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮಾತನಾಡಿದ ಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರಬಾಬು, ಸಂಕಷ್ಟದ ಸಂದರ್ಭದಲ್ಲಿ ರಕ್ತದಾನ ಮಾಡುವುದು ಅತ್ಯಂತ ಶ್ರೇಷ್ಠ ಕಾರ್ಯವಾಗಿದ್ದು, ಸ್ವಯಂಪ್ರೇರಿತ ರಕ್ತದಾನದ ಮೂಲಕ ಅಮೂಲ್ಯ ಜೀವನ ಉಳಿಸುವ ಪುಣ್ಯದ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈಜೋಡಿಸಲು ಮುಂದೆ ಬರಬೇಕೆಂದು ಹೇಳಿದರು.

ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ ದಾನಿಗಳಲ್ಲಿ ನಮ್ಮ ಜಿಲ್ಲೆಯವರೂ ಇದ್ದಾರೆ. ರಕ್ತದಾನದಿಂದ ಕೆಲವೇ ದಿನಗಳಲ್ಲಿ ಹೊಸ ರಕ್ತ ಉತ್ಪತ್ತಿಯಾಗಿ, ರಕ್ತದೊತ್ತಡ, ಸಕ್ಕರೆ ಕಾಯಿಲೆಯಂತಹ ರೋಗಗಳು ದೂರವಾಗುತ್ತವೆ. ಹೊಸ ಚೈತನ್ಯ, ಉಲ್ಲಾಸ ಕಂಡುಬರುತ್ತದೆ ಎಂದರು.

ಈ ವೇಳೆ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮಹಮ್ಮದ್ ಶಾಕೀರ್ ಮೊಹಿಯುದ್ದೀನ್ ಅವರು ಮಾತನಾಡಿ, ಈಗಾಗಲೇ ಜಿಲ್ಲೆಯಾದ್ಯಂತ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ರಕ್ತದಾನ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ರಕ್ತಕ್ಕೆ ವರ್ಷವಿಡಿ ನಿರಂತರವಾಗಿ ಬೇಡಿಕೆ ಇರುತ್ತದೆ. ಮುಖ್ಯವಾಗಿ ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರು, ಹೆರಿಗೆ ಸಂದರ್ಭದಲ್ಲಿ, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭಗಳಲ್ಲಿ, ಇತ್ತೀಚಿಗೆ ಹೆಚ್ಚಾಗುತ್ತಿರುವ ಅಪಘಾತಗಳು, ಕ್ಯಾನ್ಸರ್ ರೋಗಿಗಿಗಳು, ಥ್ಯಾಲಸೀಮಿಯಾ, ಹಿಮೊಫಿಲಿಯಾ ಮುಂತಾದ ರೋಗಿಗಳು ರಕ್ತದಾನಿಗಳನ್ನೇ ಅವಲಂಬಿಸಿರುತ್ತಾರೆ. ಈ ಎಲ್ಲ ಹಿನ್ನಲೆಯಲ್ಲಿ ಹೆಚ್ಚಿನ ರಕ್ತದ ಅವಶ್ಯಕತೆಯಿದ್ದು, 18 ವರ್ಷ ಮೇಲ್ಪಟ್ಟ ಆರೋಗ್ಯವಂತ ವ್ಯಕ್ತಿಯು ಯಾವುದೇ ಅಳುಕಿಲ್ಲದೆ ರಕ್ತದಾನ ಮಾಡುವಂತೆ ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ್, ಡಾ.ರಾಕೇಶ್, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಡ್ಯಾಪ್ಕೋ ಮೇಲ್ವಿಚಾರಕರಾದ ಮಲ್ಲಯ್ಯ ಮಠಪತಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಸರೋಜಾ.ಕೆ, ಬ್ಲಡ್ ಬ್ಯಾಂಕ್ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು

# ಆಯುರ್ವೇದ ಕೇವಲ ಆರೋಗ್ಯ ಚಿಕಿತ್ಸೆಯಲ್ಲ ಜೀವನ ವಿಜ್ಞಾನ: ಡಾ.ಸದಾನಂದ ಪಾಟೀಲ್



ಕಲಬುರಗಿ:ಅ.20:ಭಗವಾನ್ ಧನ್ವಂತರಿಅವರನ್ನುಆಯುರ್ವೇದದ ದೇವತೆ ಹಾಗೂ ದೈವೀ ವೈದ್ಯನಾಗಿ ಗೌರವಿಸಲಾಗುತ್ತದೆ. ಸಮುದ್ರಮಥನ ಸಂದರ್ಭದಲ್ಲಿ ಸಮುದ್ರದಿಂದ ಅಮೃತ ಕಲಶವನ್ನು ಹಿಡಿದು ಭಗವಾನ್ ಧನ್ವಂತರಿ ಪ್ರತ್ಯಕ್ಷವಾಗಿ ಮಾನವಕೋಟಿಗೆ ಆರೋಗ್ಯ, ಆಯುಷ್ಯ ಮತ್ತು ಶಾಂತಿಯನ್ನು ನೀಡುವ ಉದ್ದೇಶದಿಂದ ಅಶ್ವಿನಿ ದೇವತೆ ರೂಪದಲ್ಲಿ ಅವತರಿಸಿ ಆಯುರ್ವೇದವ ಪದ್ಧತಿಯನ್ನು ನೀಡಿದರು ಎಂದು ಹಿರಿಯ ಆಯುರ್ವೇದ ವೈದ್ಯರಾದ ಡಾ. ಸದಾನಂದ ಪಾಟೀಲ್ ಹೇಳಿದರು. ಕಲಬುರಗಿಯ ರಾಜಾಪುರದಲ್ಲಿರುವ ಚರಕ ಆಸ್ಪತ್ರೆಯಲ್ಲಿ ಅ.18ರಂದು ನಡೆದ ಧನ್ವಂತರಿ ಜಯಂತಿ ಆಚರಣೆ–ಯ ಪ್ರಯುಕ್ತ ನಡೆದ ವಿಶೇಷ ಪೂಜೆಯ ನಂತರ ಮಾತನಾಡಿ ಆಯುರ್ವೇದವು ಕೇವಲ ರೋಗನಾಶಕವ್ಯವಸ್ಥೆಯಲ್ಲ. ಅದು ಆರೋಗ್ಯ ಸಂರಕ್ಷಣೆಯ ಶಾಸ್ತ್ರ. ಧನ್ವಂತರಿಯ ಉಪದೇಶದಿಂದ ಶರೀರ, ಮನಸ್ಸು, ಆತ್ಮ ಮತ್ತು ಇಂದ್ರಿಯಗಳ ಸಮತೋಲನದಲ್ಲಿದೆ. ಆದ್ದರಿಂದಲೇ, ಆಯುರ್ವೇದವನ್ನು "ಜೀವನದ ವಿಜ್ಞಾನ" ಎಂದು ಕರೆಯಲಾಗುತ್ತದೆ. ಪ್ರತಿ ವರ್ಷ ಧನ್ವಂತರಿ ಜಯಂತಿಯನ್ನು, ದೀಪಾವಳಿಯ ಪೂರ್ವದಿನದಂದು, ದೇಶದಾದ್ಯಂತ ಆಯುರ್ವೇದ ವೈದ್ಯರು ಹಾಗೂ ಅಭಿಮಾನಿಗಳು ಭಕ್ತಿಪೂರ್ವಕವಾಗಿ ಆಚರಿಸುತ್ತಾರೆ. ಈ ದಿನವು ಆಯುರ್ವೇದದ ಮಹತ್ವವನ್ನು ನೆನಪಿಸುವ ಹಾಗೂ ನಮ್ಮ ಜೀವನದಲ್ಲಿ ಪ್ರಕೃತಿಯ ಆಧಾರಿತ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ದಿನವಾಗಿದೆ ಎಂದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಆಕಾಶವಾಣಿಯ ನಿಬಂಧ ಕಾರ್ಯಕ್ರಮ ಡಾ. ಸದಾನಂದ ಪೆರ್ಲ ಮಾತನಾಡಿ ಭಾರತದ ಪ್ರಾಚೀನ ವೈದ್ಯ ಪದ್ಧತಿಯನ್ನು ವಿಶ್ವಕ್ಕೆ ಕೊಟ್ಟ ಶ್ರೇಷ್ಠತೆ ನಮ್ಮ ದೇಶಕ್ಕಿದೆ. ಇದು ನಮ್ಮ ಪೌರಾಣಿಕ ಕೊಡುಗೆಯಾಗಿದ್ದು ಭಗವಾನ್‌ಥಿ ಧನ್ವಂತರಿಯ ಕೃಪೆಯಿಂದ ದೊರಕಿದೆ. ದೇಶದ ಎಲ್ಲರೂ ಆರೋಗ್ಯವಂತರಾಗಿ, ಶಾಂತಚಿತ್ತರಾಗಿ, ಸಂತೋಷಪೂರ್ಣವಾದ ಜೀವನ ನಡೆಸಲು ಆಯುರ್ವೇದ ಪದ್ಧತಿಯ ಜೀವನ ಶೈಲಿ ರೂಢಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ '

ಆರೆಸ್ಸೆಸ್ ಪ್ರಮುಖರಾದ ಮಹಾದೇವಯ್ಯ ಕರದಳ್ಳಿ, ಡಾ. ಪ್ರಿಯದರ್ಶಿನಿ ಸದಾನಂದ ಪಾಟೀಲ್, ದೇವೇಂದ್ರಪ್ಪ ರಾಮನ್, ಚಿಂಚೋಳಿ ತಾಲೂಕು ಬಿಜೆಪಿ ಅಧ್ಯಕ್ಷರಾದ ವಿಜಯಕುಮಾರ್ ಚೆಂಗಟಿ, ಸಾಮಾಜಿಕ

ಕಾರ್ಯಕರ್ತರಾದ ಎಸ್ ಎಸ್ ಹಿರೇಮಠ,, ಶರಣು ಸಾಹು,

ಸಮಾಜ ಸೇವಕರಾದ ವಿ ಶಾಂತರೆಡ್ಡಿ ಮತ್ತಿತರ ಉಪಸ್ಥಿತರಿದ್ದರು.

# ಚುನಾವಣೆ ಕಣದಿಂದ ಹಿಂದೆ ಸರಿದ ಬಿಜೆಪಿ ಬೆಂಬಲಿತ ಪೆನಾಲ್

ಬೀದರ್. ಅ.20 : ಇದೇ 23ರಂದು ಜನವಾಡಾ ಹತ್ತಿರದ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ (ಎನ್‌ಎಸ್‌ಎಸ್‌ಕೆ) ಆಡಳಿತ ಮಂಡಳಿಗೆ 2025–2030ರ ಅವಧಿಗಾಗಿ ಚುನಾವಣೆ ನಡೆಯಲಿದೆ. ಈ ಚುನಾವಣೆ ಸಂಬಂಧವಾಗಿ ಪಕ್ಷದ ಸಭೆ ನಡೆಸಲಾಗಿದೆ. ಸುದೀರ್ಘ ಚರ್ಚಿಸಿದ ಬಳಿಕ ಅತಿವೃಷ್ಟಿ ಸಂಕಷ್ಟ ಹಾಗೂ ರೈತರ ಮತ್ತು ಕಬ್ಬು ಬೆಳೆಗಾರರ ಹಿತದಿಂದ ಈ ಚುನಾವಣೆ ಸಂಬಂಧ ಕೆಲವು ಮಹತ್ವದ ನಿರ್ಣಯಗಳು ಇಲ್ಲಿ ಕೈಗೊಳ್ಳಲಾಗಿದೆ ಎಂದು ಬಿಜೆಪಿ ಹಿರಿಯ ಮುಖಂಡ ಹಾಗೂ ಕಾರ್ಖಾನೆ ಚುನಾವಣೆ ಉಸ್ತುವಾರಿಗಳಾದ ಗುರುನಾಥ ಜ್ಯಾಂತಿಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್‌ಎಸ್‌ಎಸ್‌ಕೆ ಚುನಾವಣೆಗಾಗಿ ಪಕ್ಷದ ಬೆಂಬಲಿತ ಪೆನಾಲ್ ಮಾಡಲಾಗಿತ್ತು. ಕಾರ್ಖಾನೆ ಪಾರದರ್ಶಕವಾಗಿ ನಡೆಸಲು ಹಾಗೂ ರೈತರ ಹಿತಕ್ಕಾಗಿ ಒಳ್ಳೆಯ ವಿರೋಧ ಪಕ್ಷ ಇರಬೇಕೆಂಬ ಕಾರಣಕ್ಕೆ ನಮ್ಮ ಬೆಂಬಲಿತರ ಸ್ಪರ್ಧೆಗೆ ನಿರ್ಧರಿಸಲಾಗಿತ್ತು. ಮುಂಚೆ ಕಾರ್ಖಾನೆಯ ಚುನಾವಣೆಯು ಕಳೆದ ಸೆ.27ರಂದು ನಿಗದಿಯಾಗಿತ್ತು. ಚುನಾವಣೆ ಸಂಬಂಧ ಪ್ರಚಾರ ಸಹ ಆರಂಭಿಸಲಾಗಿತ್ತು. ಪ್ರಚಾರದ ವೇಳೆ ಚುನಾವಣೆ ಸಂಬಂಧ ಕಾರ್ಖಾನೆ ಸದಸ್ಯ ರೈತರಿಂದ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬಂದಿವೆ.

# ಡಾ. ಪ್ರಣವಾನಂದ ಶ್ರೀಗಳ ಪಾದಯಾತ್ರೆ ಭಿತ್ತಿ ಪತ್ರ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ
ಕಲಬುರಗಿ:ಅ.20: ಈಡಿಗ ಬಿಲ್ಲವ ನಾಮಧಾರಿ ಸೇರಿದಂತೆ 26 ಪಂಗಡಗಳ ಸಮಗ್ರ ಏಳಿಗೆಗೆ ಮತ್ತು ಭದ್ರತೆಗಾಗಿ ಮುಂದಿನ ಜನವರಿ 6 ರಿಂದ 41 ದಿನಗಳ ಪಾದಯಾತ್ರೆ ಕೈಗೊಂಡಿರುವ ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದ ಪೂಜ್ಯ ಡಾ–ಕ್ಟರ್ ಪ್ರಣವಾನಂದ ಶ್ರೀಗಳ ಪಾದಯಾತ್ರೆಯನ್ನು ಸರ್ವರು ಬೆಂಬಲಿಸಬೇಕು ಎಂದು ಬಿಜೆಪಿ ಮುಖಂಡರಾದ ನಿತಿನ್

ಗುತ್ತೇದಾರ್ ಕರೆ ನೀಡಿದರು.

ಕಲಬುರಗಿಯ ಚಿತಾಪುರ ತಾಲೂಕು ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದಿಂದ ಬೆಂಗಳೂರಿನವರೆಗೆ ನಡೆಯುವ ಪಾದಯಾತ್ರೆಯ ಬಿತ್ತಿ ಚಿತ್ರವನ್ನು ಅಕ್ಟೋಬರ್ 19ರಂದು ಕಲಬುರಗಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು ಪೂಜ್ಯ ಪ್ರಣವಾನಂದ ಶ್ರೀಗಳು ನಮ್ಮ ಸಮಾಜದ ಏಳಿಗೆಗಾಗಿ ಮತ್ತು ಭದ್ರತೆ–ಗಾಗಿ ನಿರಂತರವಾಗಿ ಹೋರಾಟ ಮಾಡುತ್ತಿದ್ದು ಕಳೆದ ಬಾರಿ 780 ಕಿಲೋಮೀಟರ್ ಪಾದಯಾತ್ರೆಯನ್ನು ಮಂಗಳೂರಿನಿಂದ ಆರಂಭಿಸಿ ಫ್ರೀಡಂ ಪಾರ್ಕ್ ವರೆಗೆ ನಡೆಸಿದ ಪರಿಣಾಮವಾಗಿ ಈಡಿಗ ನಿಗಮವನ್ನು ಬಿಜೆಪಿ ಸರಕಾರ ಘೋಷಣೆ ಮಾಡಿತು ಮತ್ತು ಕುಲಶಾಸ್ತ್ರೀಯ ಅಧ್ಯಯನಕ್ಕೆ 25 ಕೋಟಿ ರೂಪಾಯಿ ಮಂಜೂರು ಮಾಡಿದ ಐತಿಹಾಸಿಕ ಯಶಸ್ವಿಯ ನಂತರ ಇದೀಗ ಎರಡನೇ ಬಾರಿಗೆ ಈ ಪಾದಯಾತ್ರೆಯನ್ನು ಕೈಗೊಂಡಿ–ದ್ದಾರೆ. ಜನವರಿ 6 ರಂದು ಚಿತ್ತಾಪುರದ ಕರದಾಳುನಿಂದ ಆರಂಭಗೊಳ್ಳುವ ಪಾದಯಾತ್ರೆ ಚಿತ್ತಾಪುರ, ವಾಡಿ, ಶಹಬಾದ್ ಜೇವರ್ಗಿ ಶಹಾಪುರ, ಸುರಪುರ, ಲಿಂಗಸಗೂರು ತಾವರಗೇರಾ, ಗಂಗಾವತಿ, ಹೊಸಪೇಟೆ ಚಿತ್ರದುರ್ಗ, ತುಮಕೂರು, ಮಾರ್ಗವಾಗಿ ಬೆಂಗಳೂರಿನ ಫ್ರೀಡಂ ಪಾರ್ಕಿಗೆ ತಲುಪಲಿದೆ. ಈ ಸಂದರ್ಭದಲ್ಲಿ ಸಮುದಾಯದ ಎಲ್ಲರೂ ಸ್ವಾಮೀಜಿಯವರಿಗೆ ಪೂರ್ಣ ಪ್ರಮಾಣದ ಬೆಂಬಲವನ್ನು ನೀಡಲು ಸಜ್ಜಾಗೋಣ. ಈಡಿಗ ಬಿಲ್ಲವ ಸೇರಿದಂತೆ 26 ಪಂಗಡಗಳಿಗೆ ಸಿಗಬೇಕಾದ ಸವಲತ್ತುಗಳನ್ನು ಪಡೆಯಲು ಸರಕಾರದ ಕಣ್ಣು ತೆರೆಸುವುದಕ್ಕಾಗಿ ಹೋರಾಟದ ಅಂಗವಾಗಿ ಪಾದಯಾತ್ರೆಯನ್ನು ಯಶಸ್ವಿಗೊಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಬಿತ್ತಿ ಪತ್ರ ಬಿಡುಗಡೆ ಸಮಾರಂಭದಲ್ಲಿ ಕಲ್ಯಾಣ ಕರ್ನಾಟಕ ಆರ್ಯ ಈಡಿಗ ಹೋರಾಟ ಸಮಿತಿಯ ಅಧ್ಯಕ್ಷರಾದ ಸತೀಶ್ ವಿ ಗುತ್ತೇದಾರ್, ಉಪಾಧ್ಯಕ್ಷರಾದ ಮಹಾದೇವ ಗುತ್ತೇದಾರ್, ಪ್ರಧಾನ ಕಾರ್ಯದರ್ಶಿಗಳಾದ ವೆಂಕಟೇಶ ಕಡೇಚೂರ್, ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಟ್ರಸ್ಟಿ ವೆಂಕಟೇಶ ಗುಂಡಾನೂರು, ಶಕ್ತಿಪೀಠದ ಸಂಚಾಲಕರಾದ ಡಾ. ಸದಾನಂದ ಪೆರ್ಲ,

ಸಮಾಜದ ಮುಖಂಡರಾದ ಅಂಬಯ್ಯ ಗುತ್ತೇದಾರ

ಇಬ್ರಾಹಿಂಪುರ್, ಅನಿಲ್ ಯರಗೋಳ, ರಾಜೇಶ್ ದತ್ತು ಗುತ್ತೇದಾರ್, ಬಸಯ್ಯ

ಗುತ್ತೇದಾರ್ ತೆಲ್ಲೂರ್, ಅಂಬರೀಶ್ ನಾಲವಾರ್, ಆನಂದ ಗುತ್ತೇದಾರ್ ಬಳವಡಗಿ ಮತ್ತಿತರರು ಉಪಸ್ಥಿತರಿದ್ದರು.

**500ಕೋಟಿ ನಿಗಮಕ್ಕೆ ಅಗತ್ಯ:**

**ಡಾ. ಪ್ರಣವಾನಂದ ಶ್ರೀಗಳು ನಿರಂತರವಾಗಿ ಈಡಿಗ ,ಬಿಲ್ಲವ ನಾಮಧಾರಿ ಸೇರಿದಂತೆ 26 ಪಂಗಡಗಳ ಶ್ರೇಯಸ್ಸಿಗೆ ಶ್ರಮಿಸುತ್ತಿದ್ದು ಈ ಬಾರಿ ನಾರಾಯಣ ಗುರು ನಿಗಮಕ್ಕೆ 500 ಕೋಟಿ ನೀಡಬೇಕೆಂಬ ಒತ್ತಾಯ ಈ ಪಾದಯಾತ್ರೆಯ ಪ್ರಮುಖ ಉದ್ದೇಶ. ಸಮುದಾಯದ ಜನರನ್ನು ನಿರ್ಲಕ್ಷಿಸುವುದರ ವಿರುದ್ಧ ಇದು ಎಚ್ಚರಿಕೆಯ ಪಾದಯಾತ್ರೆ ಆಗಿದೆ.**

**ಸತೀಶ್ ವಿ ಗುತ್ತೇದಾರ್**
**ಅಧ್ಯಕ್ಷರು**
**ಕಲ್ಯಾಣ ಕರ್ನಾಟಕ ಆರ್ಯ ಈಡಿಗ ಹೋರಾಟ ಸಮಿತಿ**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)


ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
ಶ್ರೀ ಎಂ. ನಾಗನಗೌಡ ಕಂದಕೂರ
ಮಾಜಿ ಶಾಸಕರು, ಗುರುಮಠಕಲ್ ಮತಕ್ಷೇತ್ರ
ದೇಶಕ್ಕೆ ಅನ್ನ ನೀಡುವ ಅನ್ನವಿಧಾತನಾದ ರೈತ ನಮಗೆಲ್ಲಾ ಪ್ರಾತಃಸ್ಮರಣೀಯ. ನೆರೆ ಸಂಕಷ್ಟಗಳೆಲ್ಲಾ ನೀಗಿ ರೈತನ ಬದುಕಿನಲ್ಲಿ ಈ ಶುಭ ದೀಪಾವಳಿ ಭರವಸೆಯ ಹೊಸ ಬೆಳಕು ಮೂಡಲಿ. ದೀಪದ ಬೆಳಕಿನಂತೆ ಎಲ್ಲರ ಬಾಳಿನಲ್ಲಿ ಸುಖ, ಸಂತೋಷ, ನೆಮ್ಮದಿ, ಸಮೃದ್ಧಿಗಳು ಒಡಮೂಡಲಿ ಎಂದು ಗುರುಮಠಕಲ್ ಮತಕ್ಷೇತ್ರದ ಹಾಗೂ ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇವೆ.
ಶುಭಾಶಯ ಕೋರುವವರು :
ಶ್ರೀ ಶರಣಗೌಡ ಕಂದಕೂರ
ಜನಪ್ರಿಯ ಶಾಸಕರು,
ಗುರುಮಠಕಲ್ ಮತಕ್ಷೇತ್ರ.
ಶ್ರೀ ಸುಭಾಷ್ಚಂದ್ರ ಕಟಕಟಿ
ಶ್ರೀ ಚನ್ನಪ್ಪಗೌಡ ಮೋಸಂಬಿ
ಶ್ರೀ ವಿಶ್ವನಾಥ ಸಿರವಾರ
ಶ್ರೀ ಅಜಯರೆಡ್ಡಿ ಯಲ್ಹೇರಿ
ಶ್ರೀ ಮಲ್ಲಣ್ಣಗೌಡ ಹಳಿಮನಿ ಕೌಳೂರು
ಶ್ರೀ ಈಶ್ವರ ನಾಯಕ್
ಶ್ರೀ ಸೋಮಣ್ಣಗೌಡ ಬೆಳಗೇರಿ
ಶ್ರೀ ಬಂದಪ್ಪ ಅರಳಿ
ಶ್ರೀ ನರಸಪ್ಪ ಕವಡೆ
ಶ್ರೀ ಉದಯಕುಮಾರ ದೊಡ್ಡಮನಿ
ಶ್ರೀ ದೊಡ್ಡನಗೌಡ ಅರಕೇರಾ ಬಿ
ಶ್ರೀ ಪರಮರೆಡ್ಡಿ ಕಂದಕೂರ


ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
ನಾಡಿನ ಸಮಸ್ತ ಬಂಧುಗಳಿಗೆ
ದೀಪಾವಳಿ
ಹಬ್ಬದ ಶುಭಾಶಯಗಳು
ಕಂಪನಿಯ ಚಿನ್ನದ ಗಣಿಗಳು
ಕಾರ್ಮಿಕ ಕಲ್ಯಾಣ ಸೌಲಭ್ಯಗಳು
ಹಟ್ಟಿ ಚಿನ್ನದ ಗಣಿ ಕಂಪನಿಯ ಪ್ರಗತಿಯ ವಿವರಗಳು
ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ
ಉದ್ದೇಶಿತ ಯೋಜನೆಗಳು
ಹಟ್ಟಿ ಚಿನ್ನದ ಗಣಿ ಕಂಪನಿಯ ನೌಕರರ ಮಕ್ಕಳಿಗಾಗಿ ಕೇಂದ್ರೀಯ ವಿದ್ಯಾಲಯ ಸ್ಥಾಪನೆ
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ
ಶ್ರೀ ಜೆ.ಟಿ. ಪಾಟೀಲ,


ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಶುಭಾಷಯಗಳು
ದೀಪಗಳ ಹಬ್ಬ ದೀಪಾವಳಿ ಸರ್ವರ ಬಾಳಲ್ಲಿ ಸನ್ಮಂಗಳವನ್ನು ತರಲಿ ಕಷ್ಟಗಳು ದೂರವಾಗಲಿ, ಬಾಳು ಬಂಗಾರವಾಗಿ, ದೀಪಾವಳಿಯ ಸಂಭ್ರಮ ವರ್ಷಪೂರ್ತಿ ನೆಲೆಸಲಿ. ಎಂದು ಹಾರೈಸಿ ದೀಪಾವಳಿ ಹಬ್ಬದ ಶುಭಾಶಯಗಳು ಕೋರುತ್ತೇನೆ.
ಶ್ರೀ ವಿಜಯಸಿಂಗ್
ಮಾಜಿ ವಿಧಾನ ಪರಿಷತ್ ಸದಸ್ಯರು,
ಕಾಂಗ್ರೆಸ್ ಪಕ್ಷದ ಮುಖಂಡರು ಬಸವಕಲ್ಯಾಣ, ಜಿಲ್ಲೆ ಬೀದರ


ದೀಪಗಳ ಹಬ್ಬದ ಶುಭಾಶಯಗಳು
RAGHOJI
HOSPITAL
For Better Health
ದೀಪಾವಳಿಯ ದೀಪದ ಬೆಳಕು ನೀವು ಮತ್ತು ನಿಮ್ಮ ಮನೆಯವರಿಗೆ ಆರೋಗ್ಯ, ಶಾಂತಿ ಮತ್ತು ಸಮೃದ್ಧಿ ತರಲಿ. ದೀಪಾವಳಿ ಹಬ್ಬದ ಶುಭಾಶಯಗಳು. ಈ ದಿನದಿಂದ ನಿಮ್ಮ ಕನಸುಗಳು ನನಸಾಗಲಿ. ನಿಮಗೆ ಮತ್ತು ನಿಮ್ಮ ಇಡೀ ಕುಟುಂಬಕ್ಕೆ ಬೆಳಕಿನ ಹಬ್ಬದ ಶುಭಾಶಯಗಳು.
ಡಾ.ರೋಹಿತ್ ರಘೋಜಿ ಎಂಬಿಬಿಎಸ್ (ಎಮ್.ಡಿ)
ಜನರಲ್ ಮೆಡಿಸಿನ್
ಕೆಎಂಸಿ ನೋಂದಣಿ ಸಂಖ್ಯೆ 112108
ಡಾ.ಶೈಲಜಾ ಆರ್.ರಘೋಜಿ ಎಂಬಿಬಿಎಸ್ ಡಿಜಿ
ಕೆಎಂಸಿ ನೋಂದಣಿ: ಎನ್ ಓ 2019 0001567 ಬಿಕೆ
ರಘೋಜಿ ಆಸ್ಪತ್ರೆಯಲ್ಲಿ ಉತ್ತಮ ವೈದ್ಯರು ಹಾಗೂ ಆಧುನಿಕ ವೈದ್ಯಕೀಯ ಸೌಲಭ್ಯಗಳಿವೆ ಇಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ಈ ಕೆಳಕಂಡಂತೆ ದೊರೆಯುತ್ತವೆ.
1) ಮಧುಮೇಹ ರೋಗ,
2) ಹೃದಯ ರೋಗ,
3) ರಕ್ತದೊತ್ತಡ,
4) ಥೈರಾಯ್ಡ್,
5) ಮೂತ್ರಪಿಂಡ ರೋಗ, ಸೇರಿದಂತೆ ಎಲ್ಲ
ವಿವಿಧ ರೋಗಗಳಿಗೆ ತಜ್ಞ ವೈದ್ಯರಿಂದ 24X7 ಗುಣಮಟ್ಟದ ಚಿಕಿತ್ಸೆ ನೀಡಲಾಗುವುದು ಇಂದೇ ಸಂಪರ್ಕಿಸಿ: 9008270165
ರಘೋಜಿ ಆಸ್ಪತ್ರೆ ಹುಮನಾಬಾದ